ಹತೀಮ್ ತಾಯ್

(ಪ್ರಚಂಡ ಬಲಿದಾನ)

....

ಏಕಾಂಕ ನಾಟಕ

ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್, ಬಿ. ಎ.,

ಪ್ರಕಾಶಕರು :

ನವಚೇತನ ಪ್ರಕಟಣಾಲಯ

ಬಸವನಗುಡಿ, ಬೆಂಗಳೂರು ೪.

ಬೆಲೆ : ೦-೬-೦.

ಸೂಚನೆ

ಈ ಏಕಾಂಕ ನಾಟಕವನ್ನು ಅಭಿನಯಿಸಲು ಇಷ್ಟಗೊಳ್ಳುವ ಶಾಲಾ ತರುಣರು, ನಾಟಕ ಕಲಾ ಮಂಡಲಿಯುವರು ಅಭಿನಯ ಒಂದಕ್ಕೆ ಐದು ರೂಪಾಯಿನಂತೆ ಸಂಭಾವನೆಯನ್ನು ಮುಂಗಡವಾಗಿ ಸಲ್ಲಿಸಿ ಅಪ್ಪಣೆಯನ್ನು ಪಡೆಯಬೇಕು.

ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್,
ನಂ. ೪೨, ಎರಡನೆ ರಸ್ತೆ, ಬಸವನಗುಡಿ,
ಬೆಂಗಳೂರು-೪

ಪ್ರಥಮ ಮುದ್ರಣ: ಮಾರ್ಚಿ ೧೯೫೩

ಮುದ್ರಣಕಾರರು:

ಶ್ರೀ ನರಹರಿ ಮುದ್ರಣಾಲಯ,
ಗಾಂಧಿ ಬಜಾರ್, ಬಸವನಗುಡಿ, ಬೆಂಗಳೂರು-೪.

ಪ್ರಕಾಶಕರ ಮುನ್ನುಡಿ

ನಮ್ಮ ಪ್ರಥಮ ಸಂಪುಟದಲ್ಲಿ ಇದು ಎರಡನೆಯ ಏಕಾಂಕ ನಾಟಕ. ಇನ್ನು ಮುಂದೆ ಕ್ರಮ ಕ್ರಮವಾಗಿ ಶ್ರೀ|| ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್, ಬಿ.ಎ., ಇವರಿಂದ ವಿರಚಿತವಾದ ಇತರ ಏಕಾಂಕ ನಾಟಕಗಳನ್ನು ಒಂದರ ಹಿಂದೊಂದು ಆದಷ್ಟು ಶೀಘ್ರವಾಗಿ ಮುದ್ರಿಸಿ ಪ್ರಕಟಿಸುತ್ತೇವೆ. ಪ್ರಥಮ ಸಂಪುಟದಲ್ಲಿ ಒಟ್ಟು ೩೬೦ ಪುಟಗಳನ್ನೊಳಗೊಂಡ ೮ ಅಥವಾ ೧೦ ಏಕಾಂಕ ನಾಟಕಗಳು ಮುದ್ರಣಗೊಂಡಾವು. ಇವೆಲ್ಲ ನಾಟಕ ಪ್ರತಿಗಳನ್ನು ಪಡೆಯಲಪೇಕ್ಷಿಸುವವರು ಮುಂಗಡವಾಗಿ ಕೇವಲ ರೂ. ೩-೬-೦ (ಮೂರು ರೂಪಾಯಿ ಆರಾಣೆಗಳನ್ನು) ನಮ್ಮ ಕಾರ್ಯಾಲಯಕ್ಕೆ ಕಳುಹಿಸಿಕೊಟ್ಟಲ್ಲಿ ಅವರಿಗಾಗಿ ಪ್ರತಿಗಳನ್ನು ಕಾದಿರಿಸಿ ಕಳುಹಿಸಲಾಗುವುದು

ಕನ್ನಡನಾಡಿನ ಗೆಳೆಯರ ಪ್ರೋತ್ಸಾಹದಿಂದ ನಮ್ಮ ಪ್ರಕಟಣ ಕಾರ್ಯವು ನಿರಾತಂಕವಾಗಿ ನಡೆಯಲಿ ಎಂದು ಬಿನ್ನವಿಸುವ

ವ್ಯವಸ್ಥಾಪಕರು:

ಗುರುವಾರ ನವಚೇತನ ಪ್ರಕಟಣಾಲಯ

೨೪-೨-೧೯೫೨ ನಂ. ಎ. 70, ಬಸವನಗುಡಿ, ಬೆಂಗಳೂರು.

ಕೃತಿಕಾರನ ಬಿನ್ನಹ

"ಹಠೀವನ್ ತಾಯಿನ್" (ಉಜ್ವಲ ತ್ಯಾಗ) ಎಂಬ ಏಕಾಂಕ ನಾಟಕದ ದ್ವಿತೀಯ ಭಾಗವಿದು. ಈ ಭಾಗದಲ್ಲಿ ಹಠೀವನ್ ತಾಯ್ ನೂಾಡಿದ ಪ್ರಚಂಡ ಬಲಿದಾನವನ್ನು ಕುರಿತು ಪ್ರಸ್ತಾಪಿಸಿರುತ್ತೇನೆ. ಶಾಲಾ ರಂಗಕ್ಷೇತ್ರಗಳಿಗೂ, ವಿಜ್ಞಾನ ವರ್ಧಕ ಚಲಚ್ಚಿತ್ರ ತಯಾರಿಕೆಗೂ ಅನುಕೂಲವಾಗಲೆಂಬ ಉದ್ದೇಶದಿಂದಲೇ ಈ ನಾಟಕಗಳನ್ನು ಬೆಳಕಿಗೆ ತರಲಾಗುತ್ತಿದೆ. ಓದುಗರ, ಪ್ರೇಕ್ಷಕರ ಒಲವಿಗೆ ಪಾತ್ರವಾದರೆ ನನ್ನ ಇಂತಹ ಕೃತಿಗಳ ರಚನೆಯು ಸಾರ್ಥಕವಾಯಿತೆಂದೆಣಿಸುತ್ತೇನೆ.

ಇತಿ ತಮ್ಮ ಗೆಳೆಯ

ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್,

ಗುರುವಾರ

೨೮—೨—೧೯೫೨

ಉದಾತ್ತ ಚರಿತ

ಹತೀಮ್ ತಾಯ್

(ಪ್ರಚಂಡ ಬಲಿದಾನ)

ಏಕಾಂಕ ನಾಟಕ

ಪಾತ್ರಗಳು.

ಹತೀಮ್ ತಾಯ್ — 'ತಾಯ್' ಪಂಗಡದ ಅಧಿಪತಿ.


ಏಮ್ರಾ ರಾಷ್ಟ್ರದ ಅರಸ.

ಪ್ರಧಾನಿ.

ಪ್ರಮುಖ ಸಭಾಸದರು.

ಸೇನಾಧಿಪತಿ.

ಅರ್ಪಣೆ



ತ್ಯಾಗ ಚಕ್ರವರ್ತಿ ಮಹಾತ್ಮ ಗಾಂಧಿ
ಈ ಪುನೀತ ಆತ್ಮೈಶ್ವರ್ಯಸಂಪನ್ನನ
ಪವಿತ್ರ ಸ್ಮರಣೆಗಾಗಿ

ಉದಾತ್ತ ಚರಿತ

ಹತೀಮ್ ತಾಯ್

ಪ್ರಸ್ತಾವನೆ: ದೃಶ್ಯ ೧

ಬಹಳ ಹಿಂದಿನ ಕಾಲದ ಮಾತು. ಅರೇಬಿಯು ಎಂದು ಇತ್ತೀಚೆಗೆ ಹೆಸರುಗೊಂಡ ಪ್ರದೇಶವೇ ಆ ಕಾಲದಲ್ಲಿ ಏಮರ್ಾ ರಾಷ್ಟ್ರ. ಅದರ ಅರಸ ಮಿಕ್ಕೆಲ್ಲ ಅರಸರಿಗಿಂತ ಹೆಚ್ಚು ಉದಾರಿಯಾಗಿದ್ದ. ಅವನಿಂದ ಉಪಕಾರ ಹೊಂದದ ಪ್ರಜೆಯಾಗಲಿ, ಸತ್ಕಾರ ಸನ್ಮಾನಗಳನ್ನು ಪಡೆಯದ ಪರ ರಾಜರಾಗಲಿ, ಪ್ರಮುಖರಾಗಲಿ ಇರಲಿಲ್ಲ. ಅದರೆ ಏಮರ್ಾ ಅರಸನನ್ನು ಕೊಂಡಾಡುವವರೆಲ್ಲರೂ 'ನಮ್ಮ ರಾಜನು ಪರಮ ಉದಾರಿ! ತಾಯ್ ಪಂಗಡಕ್ಕೆ ಅಧಿಪತಿಯಾದ ಹತೀಮನ ಔದಾರ್ಯಕ್ಕೆ ಸರಿಸಮವಾದುದು ನಮ್ಮ ರಾಜನ ಔದಾರ್ಯವೂ!' ಹೀಗೆಂದು ಸದಾ ಹತೀಮನ ಹೆಸರನ್ನು ರಾಜನ ಹೆಸರೊಂದಿಗೆ ಕೂಡಿಸಿ ಹೊಗಳುತ್ತಿದ್ದರು. ಅಹಂಭಾವಿಯಾದ ಅರಸನಿಗೆ ಇದು ಹಿಡಿಸುತ್ತಿರಲಿಲ್ಲ. ಹತೀಮನ ಹುಟ್ಟನ್ನೆಲ್ಲ ಅಡಗಿಸಿ ತಾನೇ ಏಕೈಕ ಅಸಮಾನ ದಾನವೀರನೆಂದು ಪ್ರಖ್ಯಾತಿಗೊಳ್ಳಬೇಕೆಂದು ಅರಸನು ಸಂಕಲ್ಪಗೊಂಡ. ಅಸೂಯಾಪ್ರೇರಿತನಾದ ಅರಸನು ಹತೀಮನ ನಿರ್ಮೂಲಕ್ಕೆ ಕೈಕೊಂಡ ಕಾರ್ಯವೆಂತಹುದು?

ಏಮಾನ್ ರಾಷ್ಟ್ರದರಸ ಸಿಂಹಾಸನಾರೂಢನಾಗಿ ಚಿಂತಾಕ್ರಾಂತನಾಗಿ ಯೋಚಿಸುತ್ತಿದ್ದಾನೆ.

ಏಮರ್ಾ ಅರಸ: (ಸ್ವಗತ) ಏನಿದು? ಇಷ್ಟು ಸುಪ್ರಸಿದ್ಧನಾದ ಏಮಾನ್ ರಾಷ್ಟ್ರದ ಅರಸ ನಾನು! ಹತೀಮ!

ಅವನಿಗೊಂದು ಸ್ಥಾನವೇ! ಹತೀಮ! ಅವನಿಗೊಂದು ರಾಜ್ಯವೇ! ಐಶ್ವರ್ಯವೇ! ಅಧಿಕಾರವೇ! ಹೀಗಿರಬೇಕಾದರೆ— ನನ್ನ ಔದಾರ್ಯವನ್ನು ಕೊಂಡಾಡುವಾಗ ನನ್ನ ಪುನೀತ ನಾಮದೊಂದಿಗೆ ಹತೀಮನ ಹೆಸರನ್ನೇಕೆ ಈ ಮಂಕು ಜನರು ಉಚ್ಚರಿಸುವುದು? ನನ್ನ ಹೆಸರಿನೊಡನೆ ಹತೀಮನ ಹೆಸರನ್ನು ಜೋಡಿಸಿ ಹೇಳುವುದು? ಛೀ! ಇದನ್ನು ನಾನು ಸಹಿಸೆ. ನನ್ನ ಅಂತಸ್ತೆಷ್ಟು? ಅವನ ಅಂತಸ್ತೆಷ್ಟು? ನಾನೊಬ್ಬ ನರಶಾರ್ದೂಲನಿದ್ದಂತೆ. ಈ ಹತೀಮ ಒಂದು ಕೆಲಸಕ್ಕೆ ಬಾರದ, ಕಿರುಬೆರಳನ್ನು ಕಂಡು ಹೆದರಿ ಗಾವುದ ದಾಚೆ ಓಡಿಹೋಗುವ ಬೆದರುಪುಕ್ಕ ಬೆಕ್ಕಿನಮರಿಯಂತೆ! ಇಂತಹ ಕೆಲಸಕ್ಕೆ ಬಾರದವನೊಂದಿಗೆ ನನ್ನ ಹೆಸರನ್ನು ಜೋಡಿಸಿ ಹೇಳುವ ಈ ಅಜ್ಞ ಜನರ ಅಂಧಕಾರವು ಎಂದಿಗೆ ತೊಲಗೀತೋ ಕಾಣೆನಲ್ಲ! ಇರಲಿ; ಇದಕ್ಕೊಂದು ಉಪಾಯ ವನ್ನು ಹುಡುಕಿದ್ದೇನೆ. ಆ ಅಲ್ಪ ಹತೀಮನಿಗೆ ಸಾಧ್ಯವಾಗ ಬಾರದು; ಅಂತಹ ಒಂದು ಅದ್ಭುತ ಸಮಾರಾಧನೆ! ಅತ್ಯ ಪೂರ್ವವಾದ ಆದರ ಸತ್ಕಾರ! ಆಳರಸರು, ಅವರ ಉನ್ನತ ಪ್ರತಿನಿಧಿಗಳು, ಪ್ರಮುಖರು, ಪ್ರಖ್ಯಾತರು, ಪಂಡಿತರು, ಪ್ರಧಾನಿಗಳು, ರಣವೀರರು, ಕಲಾಕೋವಿದರು, ಏಕೆ? ದೇಶ ವಿದೇಶಗಳಲ್ಲುಳ್ಳ ಸಹಸ್ರಾರು ಜನರಿಗೆ ಆಹ್ವಾನವನ್ನು ಕಳುಹಿಸಿ ಕೊಡುವಂತೆ ನನ್ನ ಪ್ರಧಾನಿಗೆ ಆಜ್ಞೆಯಿತ್ತಿರುವೆನು. ಇಂತಹ ಸಮಾರಾಧನೆಯಲ್ಲಿ ಸತ್ಕಾರ ಪಡೆಯುವವರು, ಅದರ ಆ ಪ್ರಜ್ವಲಿತ ವೈಭವವನ್ನು ನೋಡಿ ಬೆರಗಾಗಿ ಹೋಗುವುದರಲ್ಲಿ

ಅಡ್ಡಿಯಿರದು. ಆಗ ಔದಾರ್ಯಕ್ಕೆ ಪ್ರಸಿದ್ಧಿ ಹೊಂದಿದ ನನ್ನ ಹೆಸರಿನೊಡನೆ ಹತೀಮನ ಹೆಸರನ್ನು ಕೂಡಿಸಿ ಹೇಳುವ ಮಾತಂತಿರಲಿ! ಪ್ರತಿಯಾಗಿ ನನ್ನ ಆ ಅಭೂತಪೂರ್ವ ಸಾವರ ಸತ್ಕಾರಗಳನ್ನು ಅತಿಶಯ ಪ್ರಮಾಣದಲ್ಲಿ ಪಡೆದ ಅವರು ಮನ ಸೋತು ಹತೀಮನ ಹೆಸರನ್ನೇ ಮರೆತುಬಿಡುವಂತಾಗುತ್ತದೆ. ಇರಲಿ; ಪ್ರಧಾನಿ ಬರಲಿ. ಹತೀಮನ ಕೀರ್ತಿಗೂ ಒಂದು ಕಳಂಕ ಬಾರದೆ ಇದ್ದೀತೇ ನೋಡೋಣ.

(ಪ್ರವೇಶ ಪ್ರಧಾನಿ)

ಪ್ರ : ಮಹಾರಾಜರಿಗೆ ವಿಜಯವಾಗಲಿ!

ರಾ : ಪ್ರಧಾನಿ! ಸತ್ಕಾರಕೂಟಕ್ಕೆ ಆಹ್ವಾನಗಳನ್ನು ದೇಶ ವಿದೇಶಗಳಿಗೆ ಕಳುಹಿಸಿರುವೆಯಾ?

ಪ್ರ : ಅಹುದು ಪ್ರಭು! ಉತ್ತಮಾಶ್ವಗಳನ್ನು ಹತ್ತಿ ನಮ್ಮ ವೀರರು ತಮ್ಮ ನಿರೂಪವನ್ನು ವಿಸ್ತಾರ ದೂರದಲ್ಲಿರುವ ನಾನಾ ದೇಶಗಳ ಅರಸರಿಗೆ, ಅವರ ಪ್ರಧಾನಿ ಪ್ರಮುಖರಿಗೆ—ಆಸ್ಥಾನ ಪಂಡಿತರಿಗೆ, ಸೇನಾಧಿಪತಿಗಳಿಗೆ, ರಣವೀರ ಯೋಧರಿಗೆ...........ಒಬ್ಬರನ್ನೂ ಬಿಡದೆ.........ಎಲ್ಲರಿಗೂ ಕೊಟ್ಟು, ಬರಲು ಹೋಗಿರುವರು.

ರಾ : ಸರಿ; ಈಗ ನೀನು ಸತ್ಕಾರವು ಸಂಪೂರ್ಣ ಸಂಭ್ರಮ ವೈಭವಗಳಿಂದ ಕೂಡಿ ನಮ್ಮ ರಾಜ್ಯದ ಕೀರ್ತಿಗೆ ಕಲಶವನ್ನು ಕೂಡಿಸಬಹುದಾದ ಏರ್ಪಾಡುಗಳನ್ನೆಲ್ಲ ಮಾಡು.

ಪ್ರ : ಅಪ್ಪಣೆ ಪ್ರಭು!

(ರಾಜನು ಪ್ರಧಾನಿಯನ್ನು ಬೀಳ್ಕೊಡುವನು)

ರಾ : (ಸ್ವಗತ) ನಮ್ಮ ಬೊಕ್ಕಸ ತುಂಬಿದೆ. ಅದು ಕರಗಿ ಹೋದೀತೆಂಬ ಚಿಂತೆ ನನಗಿಲ್ಲ. ರಾಜ್ಯದ ಪ್ರಜೆಗಳು ಸತ್ಕಾರಕ್ಕೆ ಬೇಕಾದ ಸಾಮಗ್ರಿಗಳನ್ನು ತಂದು ನಮ್ಮ ಕಣಜದಲ್ಲಿ ತುಂಬಲಿ. ಬಂದುದೆಲ್ಲ ಬರಲಿ. ಸಮಾರಾಧನೆ-ಸತ್ಕಾರಗಳ ನೆಪದಲ್ಲಿ ಕೊಟ್ಟಿದ- ನನ್ನ ರಾಜ್ಯದ ವರ್ತಕರು ಗಳಿಸಿರುವ ಹಣದಲ್ಲಿ, ಕೂಡಿಟ್ಟ ರತ್ನಾಭರಣಗಳಲ್ಲಿ, ಅದಷ್ಟು ಭಾಗ ಬಂದು ನನ್ನ ಬೊಕ್ಕಸದಲ್ಲಿ ಬೀಳಲಿ ! ರೈತರು ಬೆಳೆದ ದವಸ ಧಾನ್ಯಗಳಲ್ಲಿ, ಹಣ್ಣು ಹಂಪಲುಗಳಲ್ಲಿ ಅತ್ಯಂತ ಉತ್ತಮ ಜಾತಿಯವು ನನ್ನ ಕಣಜದಲ್ಲಿ ತುಂಬಿಹೋಗಲಿ ! ದೇಶಕ್ಕೆ ದೇಶವೇ ಬಂದು ನನ್ನ ಸತ್ಕಾರವನ್ನು ಸ್ವೀಕರಿಸುವಾಗ ನಮ್ಮ ಪ್ರಜೆಗಳು ಉತ್ಸಾಹದಿಂದ ಸಹಕರಿಸಿಯಾರು ! ಸಹಕರಿಸಲಿ. ಹೇಗೂ ಹೆಸರು ನನ್ನದು ! ಸೇವೆ ಅವರದು ! ಆದರೆ ನನ್ನ ಆ ಅಪೂರ್ವ ಸತ್ಕಾರವನ್ನು ಪಡೆದು ಆನಂದಿಸಿದ ಗಣ್ಯ ಅತಿಥಿಗಳು ಮಾತ್ರ ಈ ಸಲ ನನ್ನನ್ನು ಕೊಂಡಾಡಿದ ಬಾಯಲ್ಲೇ ಹತೀಮುನನ್ನು ಕೊಂಡಾಡದಿರಲಿ. ಅಷ್ಟೇ ನನ್ನ ಬಯಕೆ. ಇದಿಷ್ಟು ಸಾಹಸ, ಸನ್ನಾಹಗಳಿಂದ ಕೂಡಿದ ಅಪಾರ ಸಮಾರಾಧನೆ ಇದು. ಸತ್ಕಾರ ಕಾರ್ಯಗಳು ಸಹಸ್ರಮುಖವಾಗಿರುವುವು. ಹಿಂದೆ ಯಾರೂ ಇಂತಹ ಸತ್ಕಾರವನ್ನು ನೋಡಿರಲಾರರು ; ಮುಂದೆ ನೋಡಲೂ ನೋಡಲಾರರು.

ಹತೀಮು ! ರಾಜ್ಯವಿಲ್ಲ ; ಕೋಶವಿಲ್ಲ ; ದಂಡಿಲ್ಲ : ಘಾಳಿಯಿಲ್ಲ ; ಐಶ್ವರ್ಯವಿಲ್ಲ ; ಅಧಿಕಾರವಿಲ್ಲ ; ಅರಮನೆ

ಯಿಲ್ಲ; ಅಂಗರಕ್ಷಕರಿಲ್ಲ. 'ಹತೀಮನು ಯಾರಿಗೂ ಇಲ್ಲ' ಎನ್ನುವುದಿಲ್ಲವಂತೆ! ಏನು ಈ ಜನರ ಹೊಗಳಿಕೆ! ನಾನು ಕೊಡುವಷ್ಟು ಕೈ ನೀಡಿ ಕೊಡಬಲ್ಲ ಯೋಗ್ಯತೆ ಇದೆಯೆ ಅವನಿಗೆ? 'ಯಾರನ್ನೂ ಬಾ ಎಂದು ಹತೀಮನು ಕರೆಯುವುದಿಲ್ಲ'ವಂತೆ! ಹೇಗೆ ಕರೆದಾನು? ಬಂದವರಿಗೆಲ್ಲ ಕೊಡುವಷ್ಟು ಎಲ್ಲಿದೆ ಅವನಲ್ಲಿ? 'ಹತೀಮನು ಅವರು ಇವರು ಎಂದು ನೋಡದೆ ಎಲ್ಲರಲ್ಲಿಯೂ ಉದಾರತೆ ತೋರಿಸುತ್ತಾನೆ' ಎಂಬ ಹೊಗಳಿಕೆ! ಧಗಡಿ ಭಿಕ್ಷುಕರು ಇವನಲ್ಲಿಗಲ್ಲದೆ ಮತ್ತಾರಲ್ಲಿಗೆ ಹೋದಾರು? 'ಹತೀಮನನ್ನು ಕಂಡ ಹೇಡಿಯೂ ಪರಾಕ್ರಮಿಯಾಗುತ್ತಿದ್ದನಂತೆ'. ಹತೀಮನೇ ಹೇಡಿ! ಇನ್ನು ಇವನಿಗಿಂತ ಹೇಡಿಯಾದವರು ಇನ್ನು ಹೇಗೆ ಇದ್ದಾರು? 'ಇವನನ್ನು ಕಂಡ ಶತ್ರುಗಳೂ ಮಿತ್ರರಾಗುತ್ತಾರೆ' ಎಂಬ ಉದ್ಗಾರ! ಇಂತಹ ಹೇಡಿಯನ್ನು ಕೊಂದು ಅವರ ಶಕ್ತಿಯನ್ನು ಕಲುಷ ಮಾಡಿಕೊಂಡಾರೇ ಪಾಪ? 'ಸಿಡುಕ ಶಾಂತನಾಗುತ್ತಾನೆ.' ಏನು ಮಾಡಿಯಾನು ಪಾಪ! ಇಂಥಾ ಪ್ರಾಣಿ ಮೇಲೆ ಕೋಪಿಸಿಕೊಂಡೇನು ಫಲ?' ಎಂದು.

ಛೀ! ಈ ಹತೀಮನ ವಿಚಾರ ನೆನೆಸಿಕೊಂಡಷ್ಟೂ ನನಗೆ ಚಿಂತೆಯೇ ಹೆಚ್ಚುತ್ತಿದೆ........ಏನು ಮಾಡಲಿ?

(ತೆರೆ ಬೀಳುವುದು)

ಏಮಾನ್ ರಾಜನ ಸತ್ಕಾರಕೂಟಕ್ಕೆ ಸಾವಿರಾರು ಗಣ್ಯ ಅತಿಥಿಗಳು ವಿಸ್ತಾರ ದೂರದಿಂದ ಬಂದು ಸತ್ಕಾರವನ್ನು ಕೈಕೊಂಡು, ಮಾನ ಸನ್ಮಾನಗಳನ್ನು ಯಥೇಚ್ಛವಾಗಿ ಪಡೆದು ರಾಜನ ಔದಾರ್ಯವನ್ನು ಹೊಗಳಿ ಸ್ವಸ್ಥಾನಗಳಿಗೆ ತೆರಳುವರು. ಆದರೆ ರಾಜನ ಮನಸ್ಸಿನ ಚಿಂತೆ ಮಟ್ಟಿಗೆ ತಡೆಯಲಾರದಂತಾಯಿತು. ಹತೀಮನನ್ನು ಕಂಡರೆ ಈ ಸಲ ರಾಜನ ಅಸೂಯೆ ಅಪಾರವಾದ ಜ್ವಾಲೆಯಂತೆ ಹತ್ತಿ ಉರಿಯ ತೊಡಗಿತು. ಕಾರಣವೇನು?

(ಪ್ರವೇಶ ಪ್ರಧಾನಿ)

ಪ್ರ : ಎಲ್ಲರೂ ತನ್ನ ಔದಾರ್ಯವನ್ನು ಮುಕ್ತಕಂಠದಿಂದ ಹೊಗಳಬೇಕು ಎಂದು ನಮ್ಮ ರಾಜನ ಅಭಿಮತ. ಆದರೆ ಈ ಆಹ್ವಾನಿತ ಅತಿಥಿಗಳು ಅಂದದ್ದೇನು? 'ಏಮಾನ್ ದೇಶದ ಪ್ರಭು! ಒಪ್ಪಿದೆವು; ಒಪ್ಪಿದೆವು. ಈ ಮಹದ್ವೈಭವಯುಕ್ತ-ಸಹಸ್ರಮುಖದಿಂದ ವಿರಾಜಿಸುವ ಸಂಭ್ರಮಭರಿತ ಸಮಾರಾಧನೆಗಳನ್ನೂ—ಸತ್ಕಾರವನ್ನೂ! 'ಏನು ನಿನ್ನ ದಕ್ಷತೆ! ವಿಚಕ್ಷಣೆ! ಮಹದೌದಾರ್ಯ!' ಹೀಗೆಂದು ಹೊಗಳಿದ ಈ ಅತಿಥಿವೃಂದವು ಅಷ್ಟಕ್ಕೇ ನಿಲ್ಲಿಸಬಾರದಾಗಿದ್ದಿತೇ? ಇಲ್ಲ; ಅವರು ಹತೀಮನನ್ನೂ ಸ್ತುತಿಸಿದರು. 'ಈ ಔದಾರ್ಯವನ್ನು ನೋಡಿದರೆ ನಮಗೆ ಹತೀಮನ ನೆನಪಾಗುವುದು. ಮಹಾರಾಜ! ನಿನ್ನ ಉದಾರತೆ ಹತೀಮನ ಉದಾರತೆಗೆ ಸರಿಸಮನಾಗಿದೆ' ಎಂದುಬಿಟ್ಟರು. ಇದನ್ನು ಕೇಳಿದ

ಮಹಾರಾಜ ಹೊರಗೆ ನಸುನಕ್ಕು ಪ್ರಸನ್ನನಾದವನಂತೆ ತೋರಿಸಿಕೊಂಡನು. ಆದರೆ ಅವನೆದೆ ಬತ್ತಿ ಅವನು ನಿರ್ಜೀವನಂತಾಗಿ ಹೋದ. ಹತೀಮನ ಹೆಸರೆತ್ತಿದರೆ ನಮ್ಮ ರಾಜನು ಉರಿಮುರಿದು ಬೀಳುತ್ತಿರುವನು. ಹತೀಮನು ಸೌಜನ್ಯತೆಯಿಂದ ಕೂಡಿದವನು. ಸರ್ವಸ್ವ ವನ್ನೂ ತ್ಯಾಗ ಮಾಡಲು ಸಿದ್ಧನಾದವನು. ಕೊನೆಗೆ ತನ್ನ ಪ್ರಾಣ ಸಮಾನವಾದ ದಿವ್ಯಾಶ್ವವನ್ನೇ ಬಲಿ ಗೊಟ್ಟು ರೂಮ್ ಸುಲ್ತಾನನ ಅಹಂಕಾರವನ್ನು ಅಡಗಿ ಸಿರುವನು. ಹತೀಮನ ಸರಳ ಸ್ವಭಾವವೆಲ್ಲಿ? ನಮ್ಮ ಅರಸನ ಸ್ವಾಭಿಮಾನವೆಲ್ಲಿ? ಹತೀಮನ ಸಂತಸದ ನಗು ಮುಖವೆಲ್ಲಿ? ನಮ್ಮರಸನ ಸೊಕ್ಕಿದ ಸೇಡು ಬಗೆವ ಸ್ವಭಾವವೆಲ್ಲಿ? ನರಳುವವರನ್ನು ಆದರಿಸುವ ಹತೀಮ ನೆಲ್ಲಿ? ಮರುಳರನ್ನು ನರಳಿಸುವ ಏಮಾರ್ ರಾಜನೆಲ್ಲಿ? ಹತೀಮನ ಹದಗೊಂಡ ಮಮತೆಯೆಲ್ಲಿ? ನಮ್ಮರಸನ ಅಪಾರ ಮಮಕಾರವೆಲ್ಲಿ? ಇಷ್ಟಾದರೂ ಉದಾರತೆಯ ಸೋಗಿನಲ್ಲಿ ನಮ್ಮರಸನು ಹೂಡದ ಹುಚ್ಚು ಮೆರವಣಿಗೆ ಗಳಿಲ್ಲ; ಆಡದ ಮರುಳಾಟವಿಲ್ಲ; ಮರ್ಯಾದೆಯ ಹೆಸರಿನಲ್ಲಿ ಮಾಡದ ಮೋಸವಿಲ್ಲ. ನಮ್ಮರಸನು ಇತ್ತೀ ಚೆಗೆ ಮತ್ಸರದಿಂದ ಹತೀಮನಲ್ಲಿ ತಾಳಿರುವ ಭಾವನೆ ಗಳು! ಅವು ಕೇವಲ ಅನುಚಿತ! ಅಶ್ಲೀಲ! ಅನ್ಯಾಯ! ಅಧರ್ಮ...........ಅಲ್ಲ, ಅಲ್ಲ. ಅವು ಅತ್ಯಂತ ಅಧರ್ಮ ವಾದುವು! ಏನು ಹೇಳಲಿ? 'ಹತೀಮನನ್ನೇ ಹತ ಮಾಡಿಬಿಡಬೇಕು; ಆಗ ಅವನ ಹುಟ್ಟು ಅಡಗೀತು; ಜನರು ಅವನ ಕೀರ್ತಿಯನ್ನು ಹಾಡುವುದು; ನನ್ನ

ಹೆಸರಿನೊಂದಿಗೆ ಅವನ ಹೆಸರನ್ನು ಜೋಡಿಸಿ ಹೊಗಳುವುದು—ಇವು ನಿಂತಾವು. ಹತೀಮನು ಹತನಾದ ಬಳಿಕ ಎಲ್ಲರೂ ನನ್ನನ್ನೇ ಮುಕ್ತಕಂಠದಿಂದ ಹೊಗಳಿಯಾರು! ಇದು ನಮ್ಮರಸನ ಹದಗೊಂಡ ಹವಣಿಕೆ! ಇದಕ್ಕಾಗಿ ಹತೀಮನ ತಲೆಯನ್ನು ಇಳಿಸಿ ತರುವುದಕ್ಕಾಗಿ—ನಮ್ಮ ರಾಜನು ನಮ್ಮ ಸೈನ್ಯದ ಅಶ್ವಶಾಖೆಯ ಅಧಿಪತಿಯನ್ನು ಕಳುಹಿಸಿರುತ್ತಾನೆ. ನಾನು ಬೇಡವೆಂದು ಅಂಗಲಾಚಿ ಬೇಡಿದೆ. ಅವನು ಕೇಳುವನೆ? ಹತೀಮನಂತಹ ಉದಾತ್ತ ಮಹಾನುಭಾವನನ್ನು ಕಾಯಲು ಮಹಾಮಹಿಮನು ಕಂಕಣ ತೊಟ್ಟು ಎಚ್ಚತ್ತು ಕುಳಿತಿಲ್ಲವೆ? ಇರಲಿ; ಸೇನಾಧಿಪತಿ ಹತೀಮನ ತಲೆಯನ್ನು ತರುವನೋ? ಅಥವಾ ನಮ್ಮ ರಾಜನೇ ತನ್ನ ಈ ರಾಕ್ಷಸೀ ಹವಣಿಕೆಯು ಈಡೇರದೆ—ಹತಾಶನಾಗಿ ತಲೆ ತಗ್ಗಿಸಿ ನರಳುವನೋ ನೋಡೋಣ.

(ಪ್ರವೇಶ : ಅಶ್ವಶಾಖೆಯ ಸೇನಾಧಿಪತಿ)

ಸೇ : ಪ್ರಧಾನಿ! ರಾಜಾಜ್ಞೆಯನ್ನು ಬಲ್ಲೆಯಷ್ಟೆ?

ಪ್ರ : ಬಲ್ಲೆ ಸೇನಾಧಿಪತಿ!

ಸೇ : ಹತೀಮನೆಂತಹ ಉತ್ತಮ ಉದಾರಿ ಎಂದು ನಾನು ಕೇಳಿ ಬಲ್ಲೆ. ಇಂತಹವನ ತಲೆಯನ್ನು ತರಿಯಬೇಕೆಂದು ರಾಜನಿಗೆ ಮನಸಾದುದು ಏತಕ್ಕೆ?

ಪ್ರ : ರಾಜಾಜ್ಞೆ—ಅದನ್ನು ನೆರವೇರಿಸಬೇಕು. ಇಲ್ಲದಿದ್ದರೆ ಉಲ್ಲಂಘನಕ್ಕೆ ನಿನ್ನ ತಲೆ ಉರುಳಬೇಕಾದೀತು.

ಸೇ: ಅದು ಸರಿ; ನಮ್ಮರಸನಿಗೂ—ಹತೀಮನಿಗೂ ಇರುವ ದ್ವೇಷವೇನು?

ಪ್ರ: ಕೀರ್ತಿ ನೀತಿವಂತರ ಬಾಳಿಗೆ ಕಲಶವಾಗಬಲ್ಲುದು — ಆದರೆ ಕೀರ್ತಿಗಾಗಿ ಕೊಲೆ ಮಾಡಿಸಬಹುದೇ?

ಸೇ: ಇರಲಿ; ನಾನಿನ್ನು ಹೋಗಿ ಬರಲೇ?

ಪ್ರ: ಹೊರಡುವೆಯಾ ಸೇನಾಧಿಪತಿ? ಹೋಗಿ ಬಾ.

(ಸೇನಾಧಿಪತಿ ಹೊರಡುವನು)

(ಸ್ವಗತ) ನಿನ್ನ ತಲೆಗೇ ಹೇಗೆ ಕಟ್ಟಿತೋ ಈ ತಲೆ ತೆಗೆಯುವ ಕೆಲಸ! ರಾಜನ ಉಪ್ಪು ತಿಂದದ್ದಕ್ಕೆ ಉತ್ತಮ ಮಾನವನ ತಲೆ ತರಿದು ತರುವ ಕೆಲಸ! ಸತ್ಕಾರ್ಯದಲ್ಲಿ ನಿರತನಾದ ಹತೀಮ ಪರಲೋಕವನ್ನು ಸೂರೆಗೊಳ್ಳುತ್ತಿದ್ದಾನೆ. ಹುಚ್ಚು ರಾಜಾಜ್ಞೆ ತಲೆಯ ಮೇಲೆ ಹೊತ್ತು, ಹತೀಮನ ತಲೆಯನ್ನು ತರಿಯಲು ಹೋಗಿ ನರಕದಲ್ಲಿ ಬಿದ್ದು ನರಳಾಡು. ನಿನ್ನ ಕೆಟ್ಟ ಕರ್ಮ! ನಾನೇನು ಮಾಡಬಲ್ಲೆ ಅದಕ್ಕೆ?

ದಾರುಣ ಕಾರ್ಯವನ್ನು ನೆರವೇರಿಸಲು ನಿಯಮಿತನಾದ ಸವಾಸ್ ರಾಜನ ಅಶ್ವಬಲದ ಅಧಿಪತಿ ಹತೀಮನನ್ನು ಹುಡುಕುತ್ತ ಹೊರಟ. ಬಹುದೂರ ಪ್ರಯಾಸದಿಂದ ಪ್ರಯಾಣ ಮಾಡಿ ಅವನು ಹತೀಮನ ಊರನ್ನು ಸೇರಿದ. ದಾರಿಯುದ್ದಕ್ಕೂ ಅವನು ಯೋಚಿಸುತ್ತಲೇ ಇದ್ದ:

ಸೇನಾಧಿಪತಿ: ರಾಜಾಜ್ಞೆಯನ್ನು ಮನ್ನಿಸಬೇಕು; ನಿಜ. ಆದರೆ ಇದೆಂತಹ ಆಜ್ಞೆ! ಒಬ್ಬ ನಿರಪರಾಧಿ ಸತ್ಪಾತ್ರನ ತಲೆ ತರಿಯುವುದು? 'ತಲೆ ತರಿದು ತಾರದಿದ್ದರೆ ನಿನ್ನ ತಲೆ ನೆಲಕ್ಕುರುಳೀತು, ಎಚ್ಚರಿಕೆ!' ಎಂದ ರಾಜ. 'ತಲೆ ತಂದರೆ ಹತ್ತು ಸಾವಿರ ಹೊನ್ನು' ಎಂದ. ಈ ನಮ್ಮ ರಾಜನಿಗೂ ಹತೀಮನಿಗೂ ಇರುವ ವೈಷಮ್ಯ ವೇನು? ಹತೀಮನ ವಿಚಾರ ಒಂದೇ ಒಂದು ಬಿರುನುಡಿಯನ್ನು ಆಡಿದವರನ್ನು — ಒಮ್ಮೆಯಾದರೂ ಅಗೌರವದಿಂದ ಆಡಿದವರನ್ನು — ಇದುವರೆಗೂ ನಾನು ಕಾಣಲಿಲ್ಲ. ಆದರೆ ಹತೀಮನ ತಲೆಗೆ ಹತ್ತು ಸಾವಿರ ಹೊನ್ನನ್ನು ಬೆಲೆಯಾಗಿ ಇಟ್ಟಿರುವ ನಮ್ಮ ಅರಸನ ಅಭಿಮತವಾದರೂ ಏನು? ಪ್ರಧಾನಿ ಬಾಯಿ ಬಿಚ್ಚಿ ಹೇಳಲಾರದೆ ಹೋದ. ಔದಾರ್ಯಕ್ಕೆ ವಿಶೇಷ ಪ್ರತೀತಿ ಪಡೆದ ಹತೀಮನನ್ನು ಪರ ಊರುಗಳಲ್ಲೇ ಅಷ್ಟೊಂದು ಬಗೆಯಾಗಿ ಕೊಂಡಾಡುತ್ತಿರುವರು. ಹೀಗಿರುವಾಗ ಹತೀಮನ ಹುಟ್ಟೂರಿನಲ್ಲಿ ಅವನಿಗೆ ಅಂಗರಕ್ಷಕರಿಲ್ಲದೆ ಇರುವರೇ? ಮೇಲಾಗಿ ಹತೀಮನನ್ನು ಹಿಂಡು ಹಿಂಡಾಗಿ ಜನರು ಹೊಗಳುತ್ತಿರುವಾಗ, ನಾನು ಮಾತ್ರ

ಅವನ ಕೊಲೆಗಾರನಾಗಲೇ? ಹಾಗೂ ಅವನನ್ನು ಕೊಲ್ಲಲು ನನಗೆ ಸಾಧ್ಯವೆನಿಸೀತೇ? ಹಾಗೆ ಕೊಲ್ಲುವುದು ಸಾಧುವಾದುದೇ? ತನ್ನನ್ನು ಸುತ್ತುವರಿದವರೆಲ್ಲರ ಎದೆಯನ್ನು ಸೂರೆಗೊಂಡ ಈ ಸದಯನನ್ನು—ಆನಂದದ ಅರಸನನ್ನು—ಕೊಲ್ಲು ಎಂದಿತು ಏವಾನ್ ಅರಸನ ಆಣತಿ! ಅಜ್ಞಾತನಾದ ನಾನು ಅವನನ್ನು ಏಕಾಏಕಿ ಸಂಧಿಸಿ ವಧಿಸುವ ಬಗೆ ಹೇಗೆ? ಹತೀಮನ ಹೃದಯ ಪ್ರಕಾಶದ ಮುಂದೆ ಹತ್ಯಾಕಾರನಾದ ನನ್ನ ಹವಣಿಕೆಗಳು ಈಡೇರಬಲ್ಲುವೆ? ನಾನು ಹೊರಟಾಗ ನನ್ನೆದೆಯಲ್ಲಿ ಆಳರಸನು ತುಂಬಿ ಕಳುಹಿಸಿದ ಸಾಧನ ಕಿರಣಗಳು ಈಗ ಅತಿಶಯ ಸಂತಾಪ-ಅವ್ಯಕ್ತ ಸಂಶಯಗಳಿಂದ ಮಂಕಾಗತೊಡಗಿವೆ. ಈಗೇನು ಮಾಡಲಿ? ಒಳ್ಳೆಯ ಉತ್ಪಾತಕ ಉಭಯ ಸಂಕಟದಲ್ಲಿ ಸಿಲುಕಿ ಬಿದ್ದಂತಾಯಿತಲ್ಲ!

(ಸೇನಾಧಿಪತಿಗೆ ಓರ್ವ ಅಪರಿಚಿತ ವ್ಯಕ್ತಿ ಎದುರಾಗುವನು. ಅವನನ್ನು ಕಂಡು:)

ಇದು ತಾಯ್ ಜನರು ವಸಿಸುವ ಊರಲ್ಲವೇ?

ಅಪರಿಚಿತ: ಅಹುದು; ನೀನಾರು?

ಸೇ: ನಾನೊಬ್ಬ ಏವಾರ್ ರಾಜ್ಯದ ಪ್ರಜೆ.

ಅ: ಸಂತೋಷ! ಏವಾರ್ ರಾಜ್ಯದ ಪ್ರಭುವು ಕ್ಷೇಮದಿಂದಿರುವನೇ?

ಸೇ: ಅಹುದು; ಆತನ ಅಶ್ವದಳದ ಅಧಿಪತಿ ನಾನು.

ಅ : ಬಹಳ ಸಂತೋಷ! ಇಲ್ಲಿ ಯಾರನ್ನು ಹುಡುಕು ತ್ತಿರುವೆ?

ಸೇ : ಹುಡುಕುವುದಾರನ್ನು? ಹತೀಮನನ್ನೇ!

ಅ : ಒಳ್ಳೆಯದು; ನಿನ್ನನ್ನು ಕಂಡು ಹತೀಮನು ಹರ್ಷ ಗೊಂಡಾನು.

ಸೇ : ಹತೀಮನಿರುವ ಸ್ಥಳಕ್ಕೆ ನನ್ನನ್ನು ಕರೆದೊಯ್ಯ ಬಲ್ಲೆಯಾ?

ಅ : ಅವಶ್ಯವಾಗಿ; ಹೊತ್ತು ಮುಳುಗುತ್ತಿದೆ. ಬಾ ನನ್ನೊಡನೆ. ನೀನು ಬಹಳ ದಣಿದಿರುವೆ. ಮೊದಲು ನನ್ನ ಅಲ್ಪ ಸತ್ಕಾರವನ್ನು ಪಡೆ. ಈ ಹೊತ್ತು ರಾತ್ರಿ ನನ್ನಲ್ಲೆ ತಂಗು. ರಾತ್ರಿ ವಿಶ್ರಾಂತಿ ಪಡೆ. ಪ್ರಾತಃಕಾಲದಲ್ಲಿ ಸಾವಕಾಶವಾಗಿ ಹತೀಮನನ್ನು ನೋಡಿಕೊಂಡರಾಯಿತು.

(ಏಮೂಸ್ ಸೇನಾಧಿಪತಿ ಅಪರಿಚಿತನೊಡನೆ ಅವರ ಮನೆಗೆ ನಡೆದ. ಅವನ ಅಪೂರ್ವ ಆದರಾತಿಥ್ಯಗಳನ್ನು ಪಡೆದ. ತಂಪಾದ ಪಾನೀಯಗಳಿಂದ ಬಾಯಾರಿಕೆಯಡಗಿತು. ಉತ್ಕೃಷ್ಟ ಆಹಾರಗಳಿಂದ ಹಸಿವಡಗಿತು. ಹೊಟ್ಟೆ ತುಂಬಿ ಸಂತುಷ್ಟನಾಗಿ ಅಪರಿಚಿತನು ಸ್ವತಃ ಹಾಸಿಕೊಟ್ಟ ಮೆತ್ತನೆಯ ಹಾಸಿಗೆಯಲ್ಲಿ ಮಲಗಿ ಸುಖ ನಿದ್ರೆ ಮಾಡಿದ. ಪರಿಪೂರ್ಣ ವಿಶ್ರಾಂತಿಯಿಂದ ಅವನ ಬಳಲಿಕೆಯು ತೀರಿತು. ಮರುದಿನ ಪ್ರಾತಃಕಾಲವಾಯಿತು. ಅಪರಿಚಿತನು ಮತ್ತೆ ತನ್ನ ಅತಿಥಿಗೆ ಯಥೇಚ್ಛವಾಗಿ ಉಪಚಾರ ಮಾಡಿದನು. ಆದರೆ ಸೇನಾಧಿಪತಿಗೆ ಈಗಿದ್ದ ಚಿಂತೆಯೆಂದರೆ ತಾನು ಹೊತ್ತು ತಂದಿದ್ದ ಅರಸನ ಕಾರ್ಯಭಾರವನ್ನು ನಿಪುಣತೆಯಿಂತ ನಿರ್ವಹಿಸುವುದು; ಹತೀಮನನ್ನು

ಬೇಗನೆ ಸಂಧಿಸಿ ಅವನ ಶಿರಸ್ಸನ್ನು ಛೇದಿಸಿ ತನ್ನರಸನ ಬಳಿ ತ್ವರಿತದಿಂದ ಕೊಂಡು ಹೋಗಿ ಒಪ್ಪಿಸುವುದು. ಅವನು ಪ್ರಯಾಣ ಸನ್ನದ್ಧನಾಗಿ ಹೊರಟು ನಿಂತ, ಅಪರಿಚಿತನು ಅವನನ್ನು ನೋಡಿ:

ಅ: ಅಯ್ಯಾ ಸೇನಾಧಿಪತಿ! ಇದೀಗಲೇ ಪ್ರಯಾಣ ಸನ್ನದ್ಧನಾಗಿ ಹೊರಟೆ ಎಲ್ಲಿಗೆ?

ಸೇ: ನಾನು ಬಂದ ಕಾರ್ಯವೊಂದಿರುವುದು. ಅದನ್ನು ನೆರವೇರಿಸಬೇಕು.

ಅ: ಬಲ್ಲೆ; ಹಕೀಮುವನ್ನು ನೋಡಬೇಕೆಂದು ಕೇಳಿದ್ದೆ. ನಾನು ಮರೆತಿಲ್ಲ.

ಸೇ: ಅಹುದು; ಬೇಗನೆ ಹೋಗಬೇಕು.

ಅ: ಇರಲಿ; ಹಕೀಮನೆಲ್ಲಿ ಓಡಿಹೋದಾನು? ಅವನನ್ನು ತೋರಿ ಕೊಡುವ ಭಾರವು ನನ್ನ ಹೆಗಲ ಮೇಲಿರಲಿ.

ಸೇ: ಬಹಳ ಸಂತೋಷ; ಅದಕ್ಕೇ ಹೊರಟು ನಿಂತಿರುವೆ.

ಅ! ಅದೇನು ಪ್ರಮಾದ! ಹಕೀಮನನ್ನು ಯಾವ ಕ್ಷಣದಲ್ಲಿ ಯಾರು ಬೇಕಾದರೂ ಸುಲಭವಾಗಿ ನೋಡಬಹುದು. ಅವನನ್ನು ನೋಡುವುದಕ್ಕೆ ಹೊತ್ತುಗೊತ್ತು ಏನಿಲ್ಲ.

ಸೇ: ಹಾಗೆಂದು ನಾನೂ ಕೇಳಿ ಬಲ್ಲೆ.

ಅ: ನೀನಾದರೂ ಬಹುದೂರದ ಪ್ರಯಾಣದಿಂದ ದಣಿದು ಬಂದಿರುವೆ.

ಸೇ: ಅಹುದು; ಅದು ನಿಜ. ಆದರೂ ಹಕೀಮನನ್ನು ಅತ್ಯವಸರವಾಗಿ ಕಂಡು ಹೋಗಬೇಕು.

ಅ : ಕಂಡು ಹೋಗುವಿಯಂತೆ; ನಿನ್ನಿಚ್ಛೆ ವಿಫಲವಾಗದು. ಆದರೆ ಕೊನೆಯಪಕ್ಷ ನಾಲ್ಕಾರು ದಿನಗಳಾದರೂ ನನ್ನೊಡನೆ ನಿಂತು ನಿನ್ನ ಬಳಲಿಕೆಯನ್ನು ತೀರಿಸಿಕೋ. ನನ್ನ ಅಲ್ಪ ಆತಿಥ್ಯವನ್ನು ಸಂತಸದಿಂದ ಸ್ವೀಕರಿಸಿ ನನ್ನನ್ನು ಸಂತೋಷಗೊಳಿಸು. ಅಷ್ಟೇ ನನ್ನ ಬೇಡಿಕೆ. ಇಷ್ಟು ಬೇಗ ನಿನ್ನನ್ನು ಕಳುಹಿಸಿ ಕೊಡುವುದು ನನಗಿಷ್ಟ ವಿಲ್ಲ. ನಾಲ್ಕಾರು ದಿವಸಗಳೇಕೆ? ನಿನ್ನ ಮನಸ ಬಂದಷ್ಟು ದಿವಸ ಇಲ್ಲಿ ತಂಗು; ಏನೆಂದರೆ: ನನ್ನ ಅಲ್ಪ ಆದರ ವನ್ನು ವಿಶಾಲ ಮನೋಭಾವದಿಂದ ಕೈಕೊಂಡರೆ, ಅದು ನನಗೆ ಅತುಳಾನಂದವನ್ನೀಯುವುದರಲ್ಲಿ ಸಂದೇಹ ವಿರದು.

ಸೇ : ಮಹಾಶಯ! ನಿನ್ನ ಹೆಸರು?

ಅ : ಹೆಸರಿನಲ್ಲೇನಿದೆ ಸೇನಾಧಿಪತಿ! ಹುಟ್ಟಿದಾಗ ಹೆಸರು ಇರುವುದಿಲ್ಲ. ಹೋಗುವಾಗ ಹೆಸರು ಕೂಡ ಬರುವುದಿಲ್ಲ. ಈ ನಡುವೆ ಹೆಸರನ್ನು ಕಟ್ಟಿಕೊಂಡೇನು?

ಸೇ : ಅದು ನಿಜ; ಆದರೂ ಕರೆಯುವುದಕ್ಕೆಂದು ಯಾವುದಾ ದರೊಂದು ಹೆಸರಿರಬೇಕಲ್ಲವೇ?

ಅ : ನಾನೊಬ್ಬ ಅಲ್ಪ ಮಾನವ! ಈ ಪ್ರದೇಶದ ಒಬ್ಬ ಬಡ ಪ್ರಜೆ! ಅದಿರಲಿ; ನಿಲ್ಲುವೆಯಾ? ನಿಂತು ಸತ್ಕಾರ ಪಡೆಯುವೆಯಾ?

ಸೇ : ಈ ಅಲ್ಪ ಅವಧಿಯಲ್ಲಿ ನಾನು ಪಡೆದ ಅತಿಶಯ ಆದರ ಭರಿತ ಸತ್ಕಾರವನ್ನು ಮರೆಯಲೆಂತು? ನಿನ್ನ ಮನೋ ಭಾವವು ಎಷ್ಟೊಂದು ಉದಾರತೆಯಿಂದ ಪ್ರೇರಿತ

ವಾದುದು? ನಿನ್ನ ಬಳಿ ಸಾಲ್ಕಾರು ದಿನಗಳೇಕೆ? ನನ್ನ ಇಡೀ ಆಯುಷ್ಯವನ್ನೇ ಕಳೆದು ಬಿಡಬಹುದು.

ಅ : ಸಂತೋಷ; ಹಾಗಿದ್ದಲ್ಲಿ ನಾನು ಧನ್ಯ! ನಿಲ್ಲು.

ಸೇ : ನಿಲ್ಲಬಲ್ಲೆ; ಆದರೆ ಮಹಾನುಭಾವ! ನಾನೊಂದು ಅಗತ್ಯದ ಕೆಲಸವನ್ನು ಹೊತ್ತು ತಂದಿರುವೆ; ಅದು ಅತ್ಯವಸರವಾದುದು. ಅದನ್ನು ನೆರವೇರಿಸಿಕೊಂಡು ನಾನು ಇದೀಗಲೇ ಹೊರಡಬೇಕಾಗಿದೆ. ರಾಜಾಜ್ಞೆ ಬಲವಂತಪಡಿಸುತ್ತಿದೆ. ನಿಮಿಷ ನಿಮಿಷಕ್ಕೂ ನನ್ನ ಆತುರವು ಹೆಚ್ಚುತ್ತಿದೆ. ಹೊತ್ತು ಕಳೆದು ನಿಧಾನ ಮಾಡಿದರೆ ನಮ್ಮ ಅರಸನು ಕುಪಿತನಾದಾನು.

ಅ : ಅರಸರ ಅರಸನು ನಿನ್ನ ಮತ್ತು ನಿಮ್ಮ ಅರಸನ ಮನಸ್ಸಿಗೆ ನೆಮ್ಮದಿಯನ್ನು ನೀಡಿ ಕಾಪಾಡಲಿ!

ಸೇ : ಉದಾತ್ತ! ನಿನ್ನ ಸತ್ಕಾರಕ್ಕೆ ನಾನು ಚಿರಋಣಿ. ಈಗ ನನ್ನನ್ನು ಹೋಗಗೊಡು. ನಿನಗೆ ನನ್ನ ಅನಂತ ವಂದನೆ ಗಳು! ನೀನು ನನಗೆ ಹತೀಮುನನ್ನು ಮಾತ್ರ ತೋರಿ ಕೊಟ್ಟರೆ ಸಾಕು. ಸಾಧ್ಯವಿದ್ದರೆ ಮತ್ತೊಂದು ವೇಳೆ ನಿನ್ನನ್ನು ಕಲೆತು ನಿನ್ನೊಡನೆ ಸುಖದಿಂದ ಕಾಲ ಕಳೆಯ ಬೇಕೆಂಬುದೇ ನನ್ನ ಬಯಕೆ!

ಅ : ಸಂತೋಷ! ಆದರೆ ಸೇನಾಧಿಪತಿ! ಅವಸರದ ಕೆಲಸ ಎಂದೆಯಲ್ಲ. ಅದನ್ನು ನನ್ನಲ್ಲಿ ಹೇಳಲು ನಿನಗೆ ಅಭ್ಯಂ ತರವುಂಟೇ? ಹೇಳಬಹುದಾದರೆ ಹೇಳು. ನನ್ನ ಕೈಲಾದ ಸಹಾಯವನ್ನು ನೀಡಲು ಸಿದ್ಧನಾಗಿರುವೆ.

ನಿನ್ನ ಕಾರ್ಯವನ್ನು ನೆರವೇರಿಸಿ ಕೊಡಲು ನಾನು ಬದ್ಧಕಂಕಣನಾಗಿದ್ದೇನೆ.

ಸೇ : ಸಂತೋಷ; ಪುಣ್ಯಮಯಿ! ಆದರೆ ನಾನು ಸಾಧಿಸ ಹೊರಟಿರುವ ಕಾರ್ಯವು ಪರಮ ರಹಸ್ಯವಾದುದು.

ಅ : ಇರಲಿ; ಅದನ್ನು ನಾನು ಬಯಲಿಗೆಳೆಯಲಾರೆ.

ಸೇ : ಹಾಗೆಂದು ನನಗೆ ಮನವರಿಕೆಯಾಗದೆ ಇಲ್ಲ.

ಅ : ಹಾಗಿದ್ದಲ್ಲಿ ಹೇಳು.

ಸೇ : ನಿನ್ನಲ್ಲಿ ಹೇಳುವುದರಲ್ಲಿ ನನಗೆ ಆತಂಕವಿಲ್ಲ.

ಅ : ಆತಂಕವನ್ನುಂಟು ಮಾಡುವ ಬಯಕೆ ನನಗೂ ಇಲ್ಲ.

ಸೇ : ಹಾಗಾದಲ್ಲಿ ಕೇಳು; ಬಹುದೂರದ ವಿಸ್ತಾರ ಪ್ರದೇಶದಲ್ಲೆಲ್ಲ, ತನ್ನ ವಿಶಾಲ ಮನೋಭಾವಕ್ಕೆ, ಅಮಿತ ಔದಾರ್ಯಕ್ಕೆ, ಪ್ರಬಲ ಪ್ರಖ್ಯಾತಿಯನ್ನು ಪಡೆದಿರುವ ಹತೀಮನು ಈ ಪ್ರದೇಶದಲ್ಲಿರುವನಲ್ಲವೇ?

ಅ : ಹತೀಮನೆಂಬುವನು ಇರುವನು. ಅದನ್ನು ಮಾತ್ರ ನಾನು ಬಲ್ಲೆ. ಆದರೆ ಅವನು ಪ್ರಖ್ಯಾತನೋ— ಅಪಖ್ಯಾತನೋ? ವಿಶಾಲ ಮನಸ್ಕನೋ—ಸಂಕುಚಿತ ಸ್ವಭಾವಿಯೋ ನಾನರಿಯೆ. ನಮ್ಮ ಈ ಪ್ರಾಂತ್ಯದಲ್ಲಿ ಕೃತ್ಯಕ್ಕಿರುವ ಪ್ರಾಧಾನ್ಯತೆ ಹೆಸರಿಗಿಲ್ಲ.

ಸೇ : ಇರಲಿ; ಆ ಹತೀಮನನ್ನು ನಾನು ಇದೀಗಲೇ ನೋಡಭೇಕು.

ಅ : ಹತೀಮನು ಸಮೀಪದಲ್ಲೆ ಇರುವನು. ನೋಡಿದರಾಯಿತು.

ಸೇ : ಸುಮ್ಮನೆ ನೋಡುವುದು ಮಾತ್ರವಲ್ಲ ಮಿತ್ರ !

ಅ : ಮತ್ತೇನು ?

ಸೇ : ಈ ಪ್ರಖ್ಯಾತ ಪುರುಷ ಹತೀಮನಿಗೂ ನಮ್ಮ ಅರಸನಿಗೂ ಏನು ವಿರೋಧವಿದೆಯೋ ನಾ ಕಾಣೆ.

ಅ : ಹತೀಮನು ಹಾಗೆ ಯಾರಲ್ಲಿಯೂ ವಿರೋಧ ತಾಳುವವನಲ್ಲವಲ್ಲ.

ಸೇ : ಅದನ್ನು ನಾನೂ ಕೇಳಿ ಬಲ್ಲೆ.

ಅ : ಹಾಗೆ ಯಾರಾದರೂ ಹತೀಮನಲ್ಲಿ ವಿರೋಧಗೊಂಡರೆ ತನ್ನ ಪ್ರಾಣವನ್ನಾದರೂ ಪಣವಾಗಿ ಇಟ್ಟು ಹತೀಮ ವಿರೋಧವನ್ನು ಗೆಲ್ಲಬಲ್ಲ.

ಸೇ : ಬಲ್ಲೆ, ಬಲ್ಲೆ, ಕೇಳಿಬಲ್ಲೆ ಆದರೆ ನಮ್ಮ ರಾಜ ತನ್ನ ಸೇಡನ್ನು ತೀರಿಸಿಕೊಳ್ಳಲೆಂದೋ ಅಥವಾ ತನ್ನ ಆಸೂಯೆಯನ್ನು ಈಡೇರಿಸ ಬಯಸಿಯೋ..........'ಹತೀಮನಲ್ಲಿಗೆ ಹೋಗು; ಅವನ ತಲೆಯನ್ನು ತರಿದು ತ್ವರಿತದಿಂದ ತಾ; ತಪ್ಪಿದರೆ ನಿನ್ನ ತಲೆಯು ನೆಲಕ್ಕುರುಳೀತು' ಎಂದು ಕಟ್ಟಾಜ್ಞೆ ಮಾಡಿರುತ್ತಾನೆ. ಆ ಹತೀಮನೆಲ್ಲಿರುವನು ? ಅವನಿರುವ ಸ್ಥಳವನ್ನು ಮಾತ್ರ ನನಗೆ ತೋರಿಸಿ ಕೊಟ್ಟರೆ ನಿನಗೆ ನಾನು ಕೃತಜ್ಞನಾಗಿರುತ್ತೇನೆ.

ಅ : ಸೇನಾಧಿಪತಿ! ಅರಸರು ಆಗ್ರಹಗೊಂಡಾರು; ಪರಿಗ್ರಹ ಮಾಡಿಯಾರು. ನಿಗ್ರಹಾನುಗ್ರಹ ಶಕ್ತಿಯುಳ್ಳವರು. ಇದಕ್ಕೇಕೆ ಚಿಂತಿಸುವೆ? ಅರಸನ ಅಭಿಲಾಷೆಯಾದ ಮೇಲೆ

ಅವನ ಆಣತಿಯನ್ನು ಶಿರಸಾ ವಹಿಸಿ ನಡೆಯಲೇ ಬೇಕಲ್ಲವೇ? ನಿನ್ನರಸನ ಆಜ್ಞೆಯನ್ನು ಕಂಡು ನನಗೆ ಎಳ್ಳಷ್ಟಾದರೂ ಆಶ್ಚರ್ಯವಾಗುವುದಿಲ್ಲ. ಯಾವುದೋ ಸುಯೋಗವು ಎದಿರು ನೋಡುತ್ತಿರುವುದರಿಂದಲೇ ನಿಮ್ಮರಸನಿಗೆ ಇಂತಹ ಹಂಚಿಕೆಯು ಹೊಳೆದಿರಬಹುದು.

ಸೇ: ಅದನ್ನು ನಾನೇನು ಬಲ್ಲೆ!

ಅ: ಇರಲಿ; ಸೇನಾಧಿಪತಿ! ಹತೀಮನೆಲ್ಲಿ ಓಡಿಹೋದಾನು? ಅವನು ಇಡೀ ಶರೀರವೇ ಅಗ್ನಿಯಲ್ಲಿ ಬಿದ್ದು ಬೆಂದು ಭಸ್ಮವಾಗುವ ಪ್ರಮೇಯ ಬಂದರೂ ಪರಿತಾಪಗೊಳ್ಳ ಲಾರ. ಹೀಗಿರುವಾಗ ಹತೀಮನು ಕೇವಲ ತಲೆಗಾಗಿ ತಲೆ ಕೆಡಿಸಿಕೊಳ್ಳತಕ್ಕವನಲ್ಲ.

ಸೇ: ನೀನಾಡುವ ಇದೇ ಮಾತನ್ನು ನಾನು ಹತ್ತಾರು ಜನರ ಬಾಯಿಂದ ಕೇಳಿರುವೆ. ಆದರೇನು ಮಾಡುವುದು? ನನ್ನ ವಿಧಿ! ನನ್ನನ್ನು ಈ ದಾರುಣ ಕೃತ್ಯಕ್ಕೆ ಗುರಿ ಮಾಡಿದೆ.

ಅ: ಅದಕ್ಕಾಗಿ ಚಿಂತಿಸುವಿಯೇತಕ್ಕೆ ಸೇನಾಧಿಪತಿ? ಯಾವಾತನ ಶಿರಸ್ಸನ್ನು ಛೇಧಿಸಿ ಶೀಘ್ರವಾಗಿ ನಿಮ್ಮರಸನಲ್ಲಿ ಕೊಂಡು ಹೋಗಿ ಒಪ್ಪಿಸಬೇಕೆಂದಿರುವೆಯೋ ಆ ಹತೀಮನನ್ನು ಇಂದೇ ನೋಡಬೇಕೇ? ನಾಳೆ ನೋಡಿದರಾಗದೇ? ಇಂದು ಇಲ್ಲೇ ಇದ್ದು ನನ್ನ ಆತಿಥ್ಯವನ್ನು ಪಡೆ. ನಾಳೆ ಹೋದರಾಯಿತು.

ಸೇ: ಇಲ್ಲ; ಇಲ್ಲ. ಇಂದೇ—ಇದೀಗಲೇ ನೋಡಿ ನನ್ನ ಕಾರ್ಯವನ್ನು ನೆರವೇರಿಸಿಕೊಂಡು ಹೊರಟು ಹೋಗ

ಬೇಕು. ಹಕೀಮನೆಲ್ಲಿರುವನೋ ನನಗೆ ತೋರಿಸಿ ಕೊಡುವೆಯಾ ?

ಆ : ಅವಶ್ಯವಾಗಿ ; **ನೀನು ಹುಡುಕುತ್ತಿರುವ ಆ ಹಕೀಮನು ನಾನೇ !**

ಸೇ : ಹಾಯ್ ! ಹಾಯ್ ! ದುರ್ದೈವವೇ ! ಎಂತಹ ಲೀಲೆ ನಿನ್ನದು !

ಹಕೀಮ : ಅವನಂತವರು ಅತಿ ವಿರಳ !

ಸೇ : ....

ಹ : ಏನು ಯೋಚಿಸುತ್ತಿರುವೆ ಸೇನಾಧಿಪತಿ ?

ಸೇ : ....

ಹ : ಕ್ಷಣಕಾಲದ ಮುಂದೆ ನಿನಗಿದ್ದ ಅಪಾರ ಆತುರವು ಈಗೇಕೆ ಕ್ಷಯಿಸಿ ಹೋಯಿತು ?

ಸೇ : ....

ಹ : ಈ ಮುನ್ನ ನೀನಾಡಿದಂತೆ ನಾಡೆಲ್ಲ ಹಕೀಮನನ್ನು ಕೊಂಡಾಡಿರಬಹುದು. ಅದರಿಂದ ನನ್ನ ಮನಸ್ಸಿಗೆ ಎಳ್ಳಷ್ಟೂ ಹೆಮ್ಮೆಯಿಲ್ಲ. ನಾಡ ಮಾತೇಕೆ ? ನಾಡರಸನೊಬ್ಬನಿಗೆ........ಬೇಡ........ಬೇಡ........ನಾಡ ಪ್ರಜೆಯೊಬ್ಬನಿಗೆ ಹಕೀಮನು ಜೀವದೊಂದಿಗಿರುವುದು ಅಸಹ್ಯವಾದಾಗ........ಹಕೀಮನಿಗೆ ಈ ಜಗತ್ತಿನಲ್ಲಿ ಜೀವಿಸಿರಲು ಅಧಿಕಾರವಿಲ್ಲ. ನಿಮ್ಮರಸನಿಗೆ ನನ್ನನ್ನು ಕಂಡು ಕಷ್ಟವಾದರೆ........ನನ್ನಿರುವಿಕೆಯಿಂದ ಆತನ ಬಾಳೇ ತಾರುಮಾರಾಗುವುದಿದ್ದರೆ........ಸೇನಾಧಿಪತಿ ! ಹಕೀಮನೇಕೆ ಜೀವದೊಂದಿಗೆ ಇರಬೇಕು ?

ಸೇ : ಹೇಳಲೇನಿದೆ? ನನ್ನ ಬಾಯಿ ಬಿಗಿದಂತಿದೆ.......... ಒಂದೆಡೆ ಅಸಾಧಾರಣ ರೀತಿಯ ಕರ್ತವ್ಯ! ಮತ್ತೊಂದೆಡೆ ಅಪಾರ ಕೃತಜ್ಞತೆ...........ಎರಡರ ನಡುವಿನಲ್ಲಿ ನಾನು ....ಗಾಲಿಗೂ ನೊಗಕ್ಕೂ ನಡುವೆ ಸಿಲುಕಿ ಬಿದ್ದು ನರಳುವ ಎತ್ತಿನಂತೆ!

ಹ : ಆ ಯೋಚನೆಯನ್ನು ನೀನು ಹೊರಟು ಬರುವ ಮುನ್ನವೇ ಮಾಡಿರಬೇಕಿತ್ತು.

ಸೇ : ಅದನ್ನು ಅಕ್ಷರಶಃ ಒಪ್ಪುತ್ತೇನೆ.

ಹ : ಒಪ್ಪುವುದಕ್ಕೆ ಮುನ್ನ ಒಪ್ಪು ತಪ್ಪುಗಳ ಪರಿಶೀಲನೆ. ಒಪ್ಪಿದ ಬಳಿಕ ತಪ್ಪಾದರೂ ಒಪ್ಪವಾಗಿ ಮಾಡಿ ಒಪ್ಪಿಸಬೇಕು.

ಸೇ : ಈಗ ಹತ್ಯಕ್ಕೆ ನನ್ನ ಕೈ ಅಳುಕುತ್ತಿದೆ.

ಹ : ಸೇನಾಧಿಪತಿಯಾದ ನೀನು ಅಳುಕಬಾರದು. ತಗ್ಗಿಸಿದ ನಿನ್ನ ತಲೆಯನ್ನು ಮೇಲಕ್ಕೆತ್ತು ಸೇನಾಧಿಪತಿ! ಧೀರತೆಯನ್ನು ತಾಳು. ಕತ್ತಿಯನ್ನು ಹಿರಿ! ಕರ್ತವ್ಯವನ್ನು ಈಡೇರಿಸು.

ಸೇ : ಅರಸರಿಗರಸ ನನ್ನನ್ನು ನೋಡಿ ಅಣಕವಾಡುತ್ತಿರುವನು!

ಹ ! ಸೇನಾಧಿಪತಿ! ಹೆಚ್ಚು ಮಾತು ಬೇಡ. ಹೊತ್ತು ಮಿಂಚಿದರೆ ಕೆಲಸವು ಕೈ ಮಿಂಚೀತು. ಇದೋ ನನ್ನ ಶಿರವನ್ನು ಬಲಿಪೀಠದಲ್ಲಿ ಒಡ್ಡಿರುವೆನು. ಛೇಧಿಸು. ಕೊಂಡು ಹೋಗು. ನಿಮ್ಮರಸನ ಅಡಿದಾವರೆಗಳಲ್ಲಿ ಅದನ್ನು ಎಸೆ. ಅದನ್ನು ಕಂಡು ಅವನು ಆನಂದದಿಂದ

ತುಂಬಲಿ; ಅವನ ಆತ್ಮಕ್ಕೆ ಶಾಂತಿಯುಂಟಾಗಲಿ. ಏನೋಸ್ ಅರಸನ ಆನಂದಕ್ಕೆ ನಾನೇಕೆ ಅಡ್ಡಿ ಬರಲಿ? ಹತೀಮನ ಹತ್ಯೆ! ಅದರಿಂದ ಓರ್ವ ಅರಸನ ಹೃದಯಕ್ಕೆ ಹರ್ಷ! ಬಾಳಲ್ಲಿ ಕೊನೆಯದಾಗಿ ಹುಡುಕಿ ಬಂದ ಈ ಪುಣ್ಯ! ಇದನ್ನು ಬೇಡವೆನ್ನುವಷ್ಟು ಮೂಢನೆ ಹತೀಮ?

ಸೇ: ಆಹಾ! ಎಂತಹ ವಿಪರೀತದ ಪರಿಸ್ಥಿತಿಯಿದು! ಮಹಾನುಭಾವ! ನಿನ್ನ ಸರಳ ಉದಾರತೆಯೆಲ್ಲಿ? ಆ ಅರಸನ ಕೃತ್ರಿಮ ಸಂಧಾನವೆಲ್ಲಿ? ನಾನೊಲ್ಲೆ!

ಹ: ಗುಣಕಥನಕ್ಕೆ ಇದು ಕಾಲವಲ್ಲ. ನಿಮ್ಮ ರಾಜನು ತೊಟ್ಟಿರುವ ಪಣವನ್ನು ವ್ಯರ್ಥಗೊಳಿಸಲು ಇಷ್ಟು ದೂರ ಬಂದಿರುವೆಯಾ? ಹುಡುಕಿ ಕೊಲ್ಲ ಬಂದ ನೀನು ಹತೀಮನು ಎದುರಿಗಿದ್ದರೂ ಸ್ತಬ್ಧನಾಗಿರುವೆಯೇಕೆ? ಏಕೆ ತಡಬಡಿಸುವೆ ಸೇನಾಧಿಪತಿ! ಬಂದ ಕಾರ್ಯವನ್ನು ತಡಮಾಡದೆ ಈಡೇರಿಸಿಕೋ. ಶೀಘ್ರದಿಂದ ನನ್ನ ಶಿರಸ್ಸನ್ನು ತುಂಡರಿಸು. ಅದನ್ನು ಕೈಯ್ಯಲ್ಲಿ ಹಿಡಿದು ಕೃತಾರ್ಥನಾಗು; ಕುದುರೆ ಹತ್ತಿ ಅತ್ತಿತ್ತ ತಿರುಗಿ ನೋಡದೆ ವಾಯುವೇಗದಿಂದ ಓಡಿಹೋಗು. ತಡಮಾಡಿ ನಿಂತರೆ—ನಮ್ಮವರು ಕಂಡರೆ ನಿನ್ನನ್ನು ಸುಮ್ಮನೆ ಬಿಡರು. ಆಗ ನನ್ನ ತಲೆ ನಿನ್ನ ರಾಜನ ಬಳಿ ಸೇರದು. ನಿನ್ನ ತಲೆಯೂ ಉರುಳಿ ಹೋಗದೆ ಇರದು. ಆಗ ತಲೆಯನ್ನು ಕೊಡಲನುವಾದ ನಾನು ತಲೆಯನ್ನು ತರಿಯಲು ಸಿದ್ಧನಾದ ನೀನು—ಇಬ್ಬರ ಮನೋಗತವೂ

ಮಣ್ಣುಗೂಡೀತು. ನಿಮ್ಮರಸನಿಗೂ ಮನೋರೋಗವು ಪ್ರಬಲಿಸಿ ಅವನೂ ನಮ್ಮೊಡನೆ ಮಣ್ಣು ಪಾಲಾದಾನು. ತಡ ಮಾಡದೆ ಕೆಲಸವನ್ನು ಪೂರೈಸು.

(ಹತೀಮನು ಆಗ ಏಮಾನ್ ಸೇನಾಧಿಪತಿಯ ಮುಂದೆ ಕೈ ಜೋಡಿಸಿ, ತಲೆ ತಗ್ಗಿಸಿ, ಕಣ್ಮುಚ್ಚಿ ಪರಮಾತ್ಮನನ್ನು ಧ್ಯಾನಿಸತೊಡಗಿದ. ಸೇನಾಧಿಪತಿ ತಡವರಿಸುತ್ತ ತಟಸ್ಥನಾಗಿ ನಿಂತ ಅವನು ಮನನೊಂದು ಮೌನನಾದ. ಅವನ ಕಣ್ಣು ಗಳಿಂದ ಅಶ್ರುಧಾರೆಯು ಹರಿಯಿತು. ಹತೀಮನು ಮತ್ತೆ ಹೇಳಿದ:)

ಏಕೆ ಸಾವಕಾಶ? ನಮ್ಮವರು ಯಾರಾದರೂ ಇತ್ತ ಕಡೆ ಬಂದಾರು. ನಿನ್ನ ಕೆಲಸವು ಕೆಟ್ಟೀತು. ನಿನ್ನ ಕತ್ತಿಯು ಹರಿಯದೆಂದು ಸಂಶಯವೇ ಸೇನಾಧಿಪತಿ? ಹಾಗಾದಲ್ಲಿ ಹಿಡಿ; ನನ್ನ ಕತ್ತಿಯನ್ನು ತೆಗೆದುಕೋ. ಅದು ಅಂದವಾಗಿ ಹರಿದೀತು. ಇದುವರೆಗೂ ನಾನದನ್ನು ಪಳಗಿಸಲಿಲ್ಲ. ಪಳಗಿಸುವ ಪ್ರಮೇಯವೂ ಇರಲಿಲ್ಲ. ಹಿರಿ ಕತ್ತಿಯನ್ನು; ತರಿ ಶಿರಸ್ಸನ್ನು! ತ್ವರಿತವಾಗಿ ಓಡು—ತಲೆಯನ್ನು ಹೊತ್ತು!

(ಸೇನಾಧಿಪತಿ ನಿಂತ ಸ್ಥಳದಲ್ಲೇ ಸಮಾಧಿಗ್ರಸ್ತನಾದ. ಅಲ್ಲಿಂದ ಅತ್ತಿತ್ತ ಕದಲಲಿಲ್ಲ. ಕತ್ತಿಯನ್ನು ಕಣ್ಣೆತ್ತಿ ನೋಡ ಲಿಲ್ಲ. ಅವನ ಕಣ್ಣೀರು ಮಾತ್ರ ಹರಿದು ಅವನ ಮತ್ತು ಹತೀಮನ ನಡುವೆ ನೆಲದಲ್ಲಿ ಬಿದ್ದು ಅದನ್ನು ತೋಯಿಸು ತ್ತಿತ್ತು. ಹತೀಮ ಕೇಳಿದ:)

ಏಕೆ ಕಣ್ಣೀರು ಸುರಿಸುತ್ತಿರುವೆ?

ಸೇ : ನನಗಾಗಿ ಮಾತ್ರವಲ್ಲ; ಹತೀಮುನನ್ನು ಕೊಲ್ಲುವಂತೆ ಆಜ್ಞಾಪಿಸಿ ಕಳುಹಿಸಿದ ನನ್ನ ಅರಸನಿಗಾಗಿಯೂ. ಈ ಹೇಯ ಕೃತ್ಯದ ಆಲೋಚನೆ ಅಳಿಯುವುದಕ್ಕಾಗಿ !

ಹ : ಏನಾ ಸೇನಾಧಿಪತಿ ! ಸಂಶಯವೇಕೆ ? ನನ್ನ ಮಾತಿನಲ್ಲಿ ನಂಬಿಕೆಯು ಬಾರಲಿಲ್ಲವೇ ? ಹೆದರದಿರು ; ನಾನಿತ್ತ ವಚನವು ಮಳೆಗೆ ಅಳುಕದು, ಬಿಸಿಲಿಗೆ ಒಣಗದು ; ಬಿರುಗಾಳಿಗೆ ತೂರಿ ಹೋಗದು; ಕಷ್ಟದಲ್ಲಿ ಕುಂದದು ; ಕುಸಿದು ಬಿದ್ದು ಹೋಗದು ; ಚಪಲದಿಂದ ಚಲಿಸದು. ತತ್ತಳಿಸುವಿಯೇಕೆ? ತಲೆಯನ್ನು ತರಿ ; ಹತೀಮುನು ಹತಾಶನಲ್ಲ; ಇತರರ ಹತ್ಯೆಗೆ ಹತೀಮುನು ಹೆದರಿಯಾನು ; ತಾನೇ ಹತನಾಗಲು ಹೆದರನು. ಹುಟ್ಟಿದಂದಿನಿಂದ—ಎಂದಾದರೊಂದು ದಿನ ಎಲ್ಲರೂ ಸಾಯಲೇಬೇಕು. ಅದಕ್ಕೆ ಹೆದರಬೇಕೆ? ಸಾವು ಸ್ಥಿರ ; ಅರಿತ ಮಾನವರು ಮುನ್ನವೇ ಎಚ್ಚರಗೊಂಡಾರು. ಅಂದಂದು ಮಾಡಬೇಕಾದುದನ್ನು ಎಡೆಬಿಡದೆ, ಎದೆಗುಂದದೆ ಮಾಡಿಯಾರು. ಅಂತಹವರಿಗೆ ಕರೆ ಬಂದಾಗ ಅವರ ಕೃತಿಯೇ ಅವರಿಗೆ ನೆರೆ. ಸೃಷ್ಟಿಕರ್ತನ ಸಾನಿಧ್ಯದಲ್ಲಿ ಧೃತಿಗೆಡದೆ ನಿಂತಾರು. ತಮ್ಮ ರೀತಿ ನೀತಿಗಳ ವಿಚಾರ ಸ್ಪಷ್ಟವಾಗಿ ವರದಿ ಮಾಡಿಯಾರು. ಒಡೆಯನನ್ನು ಒಪ್ಪಿಸಿಯಾರು ; ಅವನ ಒಲುಮೆಯನ್ನು ಪಡೆದಾರು. ಅಂತಹ ಮಾನವರಲ್ಲಿ ಒಬ್ಬನಾಗಿರಬೇಕೆಂಬುದೇ ನನ್ನ ಇಲ್ಲಿಯವರೆಗಿನ ಬಯಕೆ. ಅನುದಿನವೂ ಅಪಾರ ಮಹಿಮನ ಹೆಸರನ್ನು ಹೇಳಿ ಬಾಳಿದೆ. ಬದುಕಿದ್ದರೆ ಉಸಿರು ಅಳಿಯುವವರೆಗೆ ಅವನ ಹೆಸರು ಹೇಳಿಯೇ

ಜಾರುತ್ತಿದ್ದೆ. ನನ್ನ ಕೊನೆಯುಸಿರು ಹಾರಿ ಹೋಗಲಿ; ಹೆದರಿಕೆಯಿಲ್ಲ. ಇಂದು ಸತ್ತೇನು; ಈ ಕ್ಷಣದಲ್ಲಿ ಸತ್ತೇನು. ಇಂದು ಸತ್ತರೂ, ನಾಳೆ ಸತ್ತರೂ, ಹತ್ತಾರು ವರ್ಷಗಳನಂತರ ಸತ್ತರೂ, ನನಗೆ ಎಲ್ಲಾ ಒಂದೇ. ಸಾಯುವುದಕ್ಕೆ ಮುನ್ನ ಮಾಡಬೇಕಾದುದನ್ನು ಮಾಡಿ ಮುಗಿಸಿದ್ದೇನೆ. ಭಯಗೊಳ್ಳದಿರು ಸೇನಾಧಿಪತಿ! ನಾನೊಪ್ಪಿಸಬೇಕಾದ ವರದಿ ನನಗಿಂತ ಮುನ್ನ ಪರಮಾತ್ಮನ ಅರುಣ ಚರಣಗಳನ್ನು ಸೇರಿ ಸಿದ್ಧವಾಗಿದೆ ....ಧೀರತೆಯನ್ನು ತಾಳು; ವಧಿಸು! ಏಕೆ ನಿಧಾನ?

(ಏವಾನ್ ಸೇನಾಪತಿಯ ಕಂಠದಲ್ಲಿ ಕ್ಷಣಕಾಲ ಮಾತುಗಳು ಹೆಪ್ಪುಗಟ್ಟಿಕೊಂಡು ಹೋದವು. ತಾನಾಡ ಬಯಸಿದುದನ್ನು ಆಡಲಾರದೆ ಹೋದ. ಅವನ ಕೈ ನಡುಗಿತು. ಇನ್ನು ಕತ್ತಿಯನ್ನು ಹಿಡಿದಾನೇ? ಬಳಿಕ ವಿಸ್ಮಯ, ವಿಷಾದ, ಆನಂದಗಳಿಂದ ತುಂಬಿ ಹೋದ ಅವನು ಹತೀಮನ ಚರಣಗಳನ್ನು ಮುಟ್ಟಿ ನಮಸ್ಕರಿಸಿದ; ಅವನ ಪವಿತ್ರ ಪಾದಗಳ ಮೇಲೆ ಕಣ್ಣೀರು ಹರಿಸಿದ; ಶುದ್ಧಿಹೊಂದಿದ ಅಂತರಂಗದಿಂದ ಆ ಪವಿತ್ರ ಪಾದಗಳನ್ನು ತೊಳೆದ; ಚೇತರಿಸಿಕೊಂಡು ಮೇಲೆದ್ದ; ಮೆಲ್ಲಮೆಲ್ಲನೆ ನುಡಿದ :)

ಸೇ : ಮಹಾನುಭಾವ! ನಾಡೆಲ್ಲ ಮುಕ್ತಕಂಠದಿಂದ ಸ್ತುತಿಸುತ್ತಿರುವ ದಯಾಸಾಗರ! ದೀನಬಂಧು! ಉದಾತ್ತ ಚರಿತ! ನಾನೆಂತಹ ಪಾಪಾತ್ಮ! ನನಗೆ ಆದರದಿಂದ ಉಣಬಡಿಸಿದೆ; ಸತ್ಕೃತಿ ಎಸಗಿದೆ; ಸಂತಸ ನೀಡಿದೆ; ಸನ್ಮತಿ ತೋರಿದೆ; ನನ್ನನ್ನು ಶುಚಿಗೊಳಿಸಿದೆ; ಶುದ್ಧಾತ್ಮನನ್ನಾಗಿ ಮಾಡಿದೆ; ಶಾಂತಗೊಳಿಸಿದೆ; ಸಂತಾಪ

ಹರಿಸಿದೆ; ಉದ್ಧರಿಸಿದೆ! ಸಾಧುವರೇಣ್ಯ! ಧನ್ಯ! ಧನ್ಯ! ಹೇಳಲೇನಿರುವುದು? ಮಾಡಲೇನಿರುವುದು?

ಹ: ಹೊಗಳದಿರು ಸೇನಾಧಿಪತಿ!

ಸೇ: ಹೊಗಳುವುದು ಮಾತ್ರವಲ್ಲ; ನಿನ್ನಂತಹವನನ್ನು ಪೂಜಿಸಬೇಕು. ದುರಿತವ ನೀಗುವ ಕರುಣಾಮಯ ನೀನು! ಧರೆಯೆಲ್ಲ ಕಂಡು ಆನಂದಿಸುವ ದೀನ ಹೃದಯದ ಸದಾತ್ಮ! ನಿನ್ನ ಹೃದಯವು ಪವಿತ್ರ ಮಂಟಪ! ಮಂಗಳಮಯಸಾದ ಮಹಾಮಹಿಮ ಪರಮಾತ್ಮನಿಗದು ಲೀಲಾಗೃಹ! ನಿನ್ನನ್ನು ಕೊಲ್ಲ ಬಯಸಿದ ನಮ್ಮರಸ! ಅವನೆಂತಹ ಮೂರ್ಖ! ಮೂರ್ಖ ಮಾತ್ರನಲ್ಲ; ಎಂತಹ ಮತಿಹೀನ! ನೀನಾದರೂ ಗತಿದಾಯಕ! ಅರಸನ ಆಜ್ಞೆ! ಅದು ಆಜ್ಞೆಯೇ? ನೀಚ ನಿರೂಪ! ನಿನ್ನ ನೀತಿ: ಅದು ಉಚ್ಚವಾದುದು; ಉತ್ಕೃಷ್ಟವಾದುದು! ನಿನ್ನ ಸನ್ನಿಧಿ ಸಂತೋಷಕರವಾದುದು; ನಿನ್ನ ಮಾತು ಆರಿಸಿದ ಆಣಿಮುತ್ತುಗಳು! ನಿನ್ನ ಪ್ರೇಮ ಪವಿತ್ರವಾದುದು; ನಿನ್ನ ಆದರ ಆದರ್ಶವಾದುದು! ನಿನ್ನ ಗೌರವ ಗಿರಿಯಂತೆ ಅಚಲವಾದುದು! ನಿನ್ನ ಪ್ರೀತಿಗೆ ಪಾತ್ರರಾಗದವರು ಪಾಪಾತ್ಮರು! ನಿನ್ನನ್ನು ಕೊಲ್ಲ ಬಂದ ಪರಮ ನೀಚ ನಾನು! ನಿನ್ನ ಖಡ್ಗವನ್ನೇ ನನಗೆ ಕೊಡ ಬಂದ ಉಚ್ಚ ನೀನು! ಬಲಿಪೀಠದಲ್ಲಿ ನಿನ್ನ ಶಿರಸ್ಸನ್ನು ಒಡ್ಡಿದೆ; ತರಿದು ಬಿಡು ಎಂತೆ ಬೇಡಿದೆ; ಅಚಲನಾಗಿ ನಿಂತೆ! ನಿನ್ನ ಆತ್ಮಶಕ್ತಿ! ಅದು ಅದ್ಭುತವಾದುದು! ಅದನ್ನು ಕೊಲ್ಲ ಬಲ್ಲ

ವರಾರು? ಜಲಿ ಬೀಸಿ ಹುಡುಕಿದರೂ ಮೂರು ಲೋಕ ದಲ್ಲಿಯೂ ಸಿಕ್ಕರು. ಹೆಚ್ಚೇಕೆ? ಹೇ ಪುಣ್ಯಮಯಿ! ಆರಸರ ಅರಸ ಪರಮಾತ್ಮ! ಪೃಥ್ವಿಯಲ್ಲಿ ಅವನ ದಿವ್ಯ ಪ್ರತಿನಿಧಿ ನೀನು! ನಿನ್ನನ್ನು ಕೊಲ್ಲಲೇ? ಛೀ! ನಿನ್ನ ದೇಹದಲ್ಲಿಯ ಒಂದು ರೋಮ—ಒಂದು ಕಿರು ರೋಮವನ್ನು ಯಾರಾದರೂ ಕತ್ತಿಯಿಂದ ಕದಲಿಸಿದರೆ ಅವರನ್ನು ಸಹಸ್ರ ತುಂಡುಗಳಾಗಿ ಕತ್ತರಿಸಿಯೇನು? ಕೊನೆಗೆ ಅಂತಹವನು ನನ್ನ ರಾಜನಾದರೂ ನಾನವನಿಗೆ ಹೆದರಿ ಹಿಂದೆ ನಿಲ್ಲೆ. ಅರಿತೆ; ಮಹಾನುಭಾವ! ಆರ್ತರ ರಕ್ಷಣೆಗೆ ಕತ್ತಿಯ ಕೂರಲಗು—ಆರ್ತ ರಕ್ಷಕರ ಪ್ರಾಣಹರಣಕ್ಕಲ್ಲ!

ಹ: ಸೇನಾಧಿಪತಿ! ಏನಿದು ನಿನ್ನ ಮಾತು? ನೀನು ಬಂದ ಕೆಲಸವೇನು? ನೀನಾಡುತ್ತಿರುವ ಮಾತುಗಳೇನು? ನಿನಗೆ ಮತಿಭ್ರಮಣವಾಗಿರಬಹುದೇ?

ಸೇ: ಆಗಿದ್ದಿದ್ದಿರೆ ಪೂಜ್ಯ! ನೀನು ಯಾವಾಗಲೋ ಹತ ನಾಗುತ್ತಿದ್ದೆ. ಪಾಪದ ಹೊರೆಯನ್ನು ಹೊತ್ತು ನಾನು ಪ್ರಚಂಡ ದುಃಖದ ಮಡುವಿನಲ್ಲಿ ಬಿದ್ದು ಮುಳುಗು ತ್ತಿದ್ದೆ. ಇಲ್ಲ, ಇಲ್ಲ; ಮಹಾನುಭಾವ! ನಮ್ಮರಸನ ಪ್ರಜ್ಞಾರಹಿತ ಆಜ್ಞೆಯನ್ನು ಹೊತ್ತು ಬಂದ ನನ್ನ ಅಂಧ ಕಾರಮಯವಾದ ಹೃದಯದ ಮುಂದೆ ಜ್ಞಾನದೀಪ ವನ್ನು ಹೊತ್ತಿಸಿ ಇಟ್ಟೆ. ಕ್ಷಣಕಾಲದಲ್ಲಿ ತೇಜೋಪಘೆ ಗೊಂಡ ನಾನು ಮತ್ತೆ ತೇಜಸ್ಸಿನಿಂದ ವರ್ಧಿಸತೊಡ ಗಿದ್ದು ನಿನ್ನಿಂದಲೇ! ನಮ್ಮ ಅರಸನ ಆಜ್ಞೆ ಅಡವಿಯ

ಹಾಳಾಯಿತು; ಅಂತೆಯೇ ಅಸೂಯಾಪ್ರೇರಿತನಾದ ಅವನ ಆಸೆಯು ಮಣ್ಣುಗೂಡಿತು.

ತ: ಈಗಲೂ ಮಿಂಚಿ ಹೋಗಲಿಲ್ಲ. ನಿನ್ನಿಚ್ಛೆಯಿದ್ದರೆ ನಿಮ್ಮ ಅರಸನ ಆಜ್ಞೆಯನ್ನು ನೆರವೇರಿಸು; ಆವನ ಆಸೆ ಮಣ್ಣುಗೂಡದಿರಲಿ

ಸೇ: ಹತೀಮ! ನೀನು ಹುತಾತ್ಮ! ಇಷ್ಟು ಹೇಳಿ ಕೇಳಿದ ಮೇಲೆ ನಾನು ನಿನ್ನ ತಲೆಯನ್ನು ತರಿಯಬೇಕು; ಅಲ್ಲವೇ? ಸಾಕು; ಆದದ್ದು ಸಾಕು. ನನ್ನ ಉಸಿರಿರುವವರೆಗೆ ನಾನು ಮರೆಯಲಾರೆ. ಇನ್ನೇಕೆ? ಪಾಪ ಕೃತ್ಯಕ್ಕಾಗಿ ಇಲ್ಲಿಗೆ ಬಂದೆ; ನನ್ನ ಕಣ್ಣಿಗೆ ಮುಸುಕಿದ್ದ ಪರೆ ಬಿಚ್ಚಿತು. ನಾನು ನಿನಗೆ ಶರಣನಾಗಿದ್ದೇನೆ. ಈ ನಿಕೃಷ್ಟ ದೇಹವನ್ನು ಹೊತ್ತು, ತಲೆ ತಗ್ಗಿಸಿ ನಿಮಾನ್ ಅರಸನ ಎದುರಿನಲ್ಲಿ ಹೋಗಿ ನಿಲ್ಲಲೇ? ಅವನ ಇಚ್ಛೆಯನ್ನು ನಾನು ನೆರವೇರಿಸಲಿಲ್ಲ. 'ಹತೀಮನ ತಲೆಗೆ ಹತ್ತು ಸಾವಿರ ಹೊನ್ನು' ಎಂದಿದ್ದ. ಹತ್ತು ಸಾವಿರ ಹೊನ್ನೇಕೆ? ಅವನ ಇಡೀ ರಾಜ್ಯವಲ್ಲ—ಅವನದು—ಅವನ ಪ್ರಜೆಗಳ—ಒಟ್ಟುಗೂಡಿದ ಹೊನ್ನಿನ ರಾಶಿ—ಪವಿತ್ರವಾದ ನಿನ್ನ ಒಂದು ಉಂಗುಷ್ಟವನ್ನು ಕೊಳೆಯಲಾರದು! ರಾಜನು ನನ್ನನ್ನು ಕಂಡೊಡನೆ ನನ್ನನ್ನು ಶೂಲಕ್ಕೆ ಏರಿಸದೆ ಬಿಡನು. ಅಥವಾ ತನ್ನ ಕ್ರೂರ ಖಡ್ಗದಿಂದ ನನ್ನನು ಹರಿದಾನು. ಆ ನೀಚನ ಹಸ್ತದಿಂದ ಮೃತ್ಯುವನ್ನು ಅಪ್ಪಿಕೊಳ್ಳಲೇ? ಬೇಡ; ಬೇಡ. ಹೇ ಪುಣ್ಯಚರಿತ! ಅದಕ್ಕೆ ಬದುಲು ನನ್ನಲ್ಲಿ ಮರುಕಗೊಳ್ಳು; ಪಾಪಿಯಾದ ನನ್ನ ತಲೆಯನ್ನು

ನಿನ್ನ ಪವಿತ್ರ ಖಡ್ಗದಿಂದ ನೀನೇ ತುಂಡರಿಸು; ತುಂಡರಿಸಿ ಅದನ್ನು ಹದ್ದು ಕಾಗೆಗಳಿಗೆ ಬಿಸಾಡು; ತಿಂದು ತೃಪ್ತಿ ಹೊಂದಲಿ. ನಿನ್ನಂತಹ ಶುದ್ಧಾತ್ಮರ ಎದುರಿನಲ್ಲಿ ನನ್ನಂತಹ ನೀಚ ಮಾನವರು ತಲೆಯೆತ್ತಿ ತಿರುಗುವುದು ಉಚಿತವಲ್ಲ. ಶತ್ರುವಾಗಿ ನಿನ್ನ ಬಳಿ ನಾ ಬಂದೆ; ಸತ್ಕರಿಸಿ, ಸುಜ್ಞಾನವನ್ನು ನೀಡಿ ಮಿತ್ರನನ್ನಾಗಿ, ಶರಣನನ್ನಾಗಿ ಮಾಡಿದೆ. ಜ್ಞಾನದರಸೇ! ನಿನ್ನಿಂದ ಹತನಾದರೆ ನನ್ನ ಭಾಗ್ಯಕ್ಕೆ ಎಣೆಯಿರದು. ಧನ್ಯ! ಧನ್ಯ!!

(ಸೇನಾಧಿಪತಿ ಅಳಲಿ, ಬಳಲಿ, ಪರಿತಪಿಸಿ ಪತೀಮನ ಪಾದಗಳನ್ನು ಮತ್ತೆ ಮುದ್ದಾಡಿ, ಕಂಬನಿಗರೆದು ಆರ್ತನಾಗಿ ರೋದಿಸಿದ. ಪತೀಮನು ಆವನನ್ನು ಹಿಡಿದೆತ್ತಿ, ತಬ್ಬಿ ಮುದ್ದಾಡಿ, ಕಂಬನಿಗರೆದು ಕನಿಕರದಿಂದ ಹೇಳಿದ:)

ಪ: ಮಿತ್ರ! ಏಳು, ಕೊರಗಬೇಡ. ನಡೆವವರು ಎಡವರಿಯಾರು. ತಪ್ಪು ಮಾಡದ ಮಾನವರಿಲ್ಲ. ತಪ್ಪು ತಪ್ಪಾಗಿ ಕಂಡಾಗ ಒಪ್ಪಿಕೊಳ್ಳುವುದು ಒಳಿತು; ಅದು ಮಾನ್ಯವಾದೀತು. ಅರಿಯದ ಪಾಪಕ್ಕೆ ನೀನೇನು ಮಾಡೀಯೆ? ಅರಿತ ಬಳಿಕ ಪರಿತಪಿಸಿದೆ; ಪಶ್ಚಾತ್ತಾಪ ಗೊಂಡೆ; ನೀನೀಗ ಪುನೀತನಾದೆ. ಹೋಗು; ಎದೆಗುಂದಬೇಡ; ನಿಮ್ಮರಸನಲ್ಲಿಗೆ ಹೋಗು; ನಡೆದೆಲ್ಲ ವಿಚಾರವನ್ನು ಅವನಿಗರುಹು; ಕಿರು ಸಮಾಚಾರವನ್ನೂ ಮುಚ್ಚುಮರೆ ಮಾಡದಿರು; ಅವನು ಗ್ರಹಿಸಿಯಾನು; ಗ್ರಹಿಸಿ ಅನುಗ್ರಹಿಸಿಯಾನು. ಹಾಗೂ ದಿಟ್ಟತನದಿಂದ ಅವನು ಕುಪಿತನಾದರೆ ಕುಗ್ಗದೆ ಹೇಳು. ಈಗಲೂ

ಹತೀಮನು ಶಿರಸ್ಸನ್ನು ಒಪ್ಪಿಸಲು ಸದಾ ಸಿದ್ಧನಿರುವನು' ಎಂದು. ಕಳುಹಿಸಿದರೆ ನೀನಾಗಿ ಬಂದು ನನ್ನ ಶಿರಸ್ಸನ್ನು ಕೊಂಡು ಹೋಗು. ಅಥವಾ ದೂತರು ಬಂದರೂ ಅಡ್ಡಿಯಿಲ್ಲ. ಇನ್ನೂ ಹೇಳು ನಿಮ್ಮ ಅರಸನಲ್ಲಿ: 'ಹತೀಮನ ತಲೆ ಮಾತ್ರವಲ್ಲ; ಹತೀಮನೇ ನೇರವಾಗಿ ಬೇಕಾದರೆ ಬಂದಾನು. ತನ್ನ ಇಡೀ ದೇಹವನ್ನೇ ಒಪ್ಪಿಸಿಯಾನು' ಎಂದು. ನನ್ನನ್ನು ಸಂಹರಿಸಲಿ. ಸಂತುಷ್ಟಿ ಹೊಂದಲಿ. ಅಧೀರನಾಗದಿರು ಮಿತ್ರ! ಪರಮಾತ್ಮನು ನಿನಗೆ ನೆರವಾಗಿರಲಿ. ಹೋಗಿ ಬಾ.

(ಹತ್ಯಾಕಾರನಾಗಿ ಬಂದಿದ್ದ ಸೇನಾಧಿಪತಿ ಪರಿಪೂರ್ಣವಾಗಿ ಪರಿವರ್ತನಗೊಂಡ. ಹತೀಮನು ಅವನನ್ನು ಗಾಢವಾಗಿ ಆಲಿಂಗಿಸಿದ. ಧನ ಕನಕ ವಸ್ತ್ರಗಳನ್ನು ಅವನಿಗೆ ಬಹುಮತಿಯಾಗಿ ಕೊಟ್ಟ. ಸತ್ಕರಿಸಿ ಸಂತಸಗೊಂಡ. ಅತಿಶಯ ಪ್ರಮಾಣದಲ್ಲಿ ಪ್ರೇಮ ಸುಧಾರಸವನ್ನು ಸುರಿಸಿದ. ಅತಿಥಿಯನ್ನು ಬೀಳ್ಕೊಟ್ಟ).

ಸೇನಾಧಿಪತಿ ಹಗುರಗೊಂಡ ಮನಸ್ಸಿನಿಂದ–ಅತ್ಯಂತ ನಮ್ರತೆಯಿಂದ–ಏರ್ಮಾ ರಾಜನ ಬಳಿ ಬಂದು ಸೇರಿದ. ತಲೆ ತಗ್ಗಿಸಿ ಪ್ರಣಾಮ ಮಾಡಿದ. ಅವನ ಬರುವಿಕೆಯನ್ನೇ ಆತುರದಿಂದ ಇದಿರು ನೋಡುತ್ತಿದ್ದ ರಾಜ:

ರಾಜ : ಸೇನಾಧಿಪತಿ! ಹೋದ ಕಾರ್ಯವೇನಾಯಿತು? ಅದನ್ನು ಮೊದಲು ಹೇಳು. ನಿನ್ನ ಕುದುರೆಯ ಜೀನಿನ ತುದಿಯಲ್ಲಿ ಹಶೀಮನ ತಲೆಯು ನೇತಾಡುತ್ತಿರುವುದೇ ?

ಸೇ : ಇಲ್ಲ; ಅರಸೇ! ಹಶೀಮನ ಆತ್ಮದೊಂದಿಗೆ ನನ್ನ ಆತ್ಮವು ಬೆರೆತುಹೋಗಿದೆ."

ರಾ : ಏನು ಹೇಳಿದೆ? ನಾಚಿಕೆಯಾಗುವುದಿಲ್ಲವೆ ನಿನಗೆ? ನನ್ನ ಆಜ್ಞೆಯನ್ನು ಉಲ್ಲಂಘಿಸಿದೆ; ಮೇಲ್ಪಟ್ಟು ಪ್ರತಿಷ್ಠೆಯಿಂದ ಅಧಿಕ ಪ್ರಸಂಗ ಮಾಡುವ ಎದೆಗಾರಿಕೆ ಬೇರೆ! ನೀಚ! ನಿನ್ನ ಕೊರಳು ಶೂಲಕ್ಕೇರಬಾರದೇತಕ್ಕೆ?

ಸೇ : ಶಾಂತವಾಗಿರಿ ಪ್ರಭು!

ರಾ : ಹಶೀಮನಲ್ಲಿ ಹೋಗಿ ಧರ್ಮ ಬೋಧೆ ಬೇರೆ ಕಲಿತು ಬಂದೆಯೋ ?

ಸೇ : ಅಹುದು; ನಿಮ್ಮ ಶೂಲಕ್ಕೆ ಮಾತ್ರವಲ್ಲ! ಜಾಲಕ್ಕೂ ಹೆದರದೆ ಧರ್ಮಸೂತ್ರವನ್ನು ಅರಿತು ಆನಂದಗೊಂಡು ಬಂದಿರುವೆ.

ರಾ : ನಾಲಿಗೆಯನ್ನು ಬಿಗಿ ಹಿಡಿ ಮೂರ್ಖ! ನನ್ನ ಖಡ್ಗದ ರುಚಿಯನ್ನೇ ಅಪೇಕ್ಷಿಸುವಂತಿದೆ ನೀನು.

ಸೇ: ಪ್ರಭು! ದುರುನುಡಿ, ಬಿರಸು ಬಾಣಗಳೆಲ್ಲ ಒತ್ತಟ್ಟಿಗಿರಲಿ. ಹತೀಮನ ಆತ್ಮಶಕ್ತಿಯಿಂದ ಗೆಲ್ಲಲ್ಪಟ್ಟವರನ್ನು ಕಂಡು ಪೃಥ್ವಿಯ ಪ್ರಬಲ ಅಸ್ತ್ರ ಶಸ್ತ್ರಗಳೆಲ್ಲ ಒಮ್ಮಿಂದೊಮ್ಮೆ ನಿರ್ವೀರ್ಯವಾದಾವು!

ರಾ: ಏನೆಂದೆ? ಎಲ್ಲೆ ಮಿಂಚಿದ ಈ ಮಾತುಗಳನ್ನು ಆಡುತ್ತಿರುವ ನಿನ್ನ ನಾಲಿಗೆಯನ್ನು ಸೀಳಿ ನಾಯಿಗಳಿಗೆ ಎಸೆದು ಬಿಟ್ಟೇನು. ಎಚ್ಚರಿಕೆ! ಕೈಲಾಗದ ಹೇಡಿ!

ಸೇ: ಪ್ರಭು! ತಾವು ಆಗ್ರಹಗೊಳ್ಳುವಿರಿ ಎಂದು ನಾನು ಬಲ್ಲೆ. ಆದರೂ ನಾನಾಡ ಬೇಕಾದ ಕೆಲ ಮಾತುಗಳಿವೆ. ಅವುಗಳನ್ನು ಸಾವಧಾನ ಚಿತ್ತದಿಂದ ಲಾಲಿಸಿ. ಅದರನಂತರ ನಾಲಿಗೆಯನ್ನು ಸೀಳಿ; ಇನ್ನು ಏನೇನು ಮಾಡಬೇಕೆಂದು ತೋರುವುದೋ ಎಲ್ಲವನ್ನೂ ಮಾಡಿ; ಬೇಡವೆನ್ನಲಿಲ್ಲ.

ರಾ: ಹಾಗಾದರೆ ನೀನೊದರಬೇಕೆಂದಿರುವುದನ್ನು ಬೇಗ ಒದರು. ನನ್ನ ಸಹನೆ ಮಿತಿ ಮೀರುತ್ತಿದೆ.

ಸೇ! ಹತೀಮನನ್ನು ಹುಡುಕುತ್ತ ಹೋದೆ. ಅಪರಿಚಿತನೊಬ್ಬನು ಎದುರಾದ; ತನ್ನ ಮನೆಗೆ ಕರೆದುಕೊಂಡು ಹೋದ; ಅತ್ಯಂತ ಆದರದಿಂದ ಸತ್ಕರಿಸಿದ. ಆ ರಾತ್ರಿ ಕಳೆಯಿತು. ಮರುದಿನ ಪ್ರಾತಃಕಾಲ ನಾನು ಅವನನ್ನು ಕೇಳಿದೆ 'ಹತೀಮನನ್ನು ತೋರಿ ಕೊಡುವೆಯಾ?' ಎಂದು. 'ಹತೀಮನೇನೂ ದೂರವಾಗಿಲ್ಲ; ತೋರಿ ಕೊಟ್ಟೇನು; ಆದರೆ ನಾಲ್ಕಾರು ದಿವಸ ನನ್ನಲ್ಲೆ ಉಳಿದು ನನ್ನ ಸತ್ಕಾರವನ್ನು ಕೈಕೊಂಡು ಹೋಗು' ಎಂದು ಅತಿ

ದೈನ್ಯದಿಂದ ಬೇಡಿದೆ. 'ಆಗದು; ರಾಜಾಜ್ಞೆ—ಅತ್ಯಂತ ಅವಸರದಿಂದ ಹಕೀಮನನ್ನು ಕಂಡು ಕೆಲಸವನ್ನು ಪೂರೈಸಿ ಹಿಂತಿರುಗಬೇಕು' ಎಂದೆ. 'ರಹಸ್ಯವಲ್ಲದಿದ್ದರೆ ನನ್ನಲ್ಲಿ ಹೇಳು; ನಾನು ನಿನ್ನ ಕಾರ್ಯಕ್ಕೆ ಸಹಾಯ ಮಾಡುತ್ತೇನೆ' ಎಂದ. 'ಹಕೀಮನ ತಲೆಯನ್ನು ಕಡಿದು ತರುವಂತೆ ನಮ್ಮರಸನ ಆಜ್ಞೆ ಇದೆ' ಎಂದೆ. 'ಹಾಗಾದರೆ ನೀನು ಹುಡುಕುತ್ತಿರುವ ಹಕೀಮನು ನಾನೇ. ನನ್ನ ಇರುವಿಕೆಯಿಂದ ಒಬ್ಬ ಪ್ರಜೆಗೆ ಅಸಹ್ಯವಾಗಿದ್ದರೂ ನಾನು ಜೀವಿಸಿರಲಾರೆ. ಹಾಗಿರುವಲ್ಲಿ ಒಬ್ಬ ರಾಜನಿಗೆ ನಾನಳಿಯುವುದರಿಂದ ನೆಮ್ಮದಿಯುಂಟಾಗುವುದಿದ್ದರೆ—ನನ್ನ ಬಾಳನ್ನು ಕೊನೆಗಾಣಿಸು; ತಾನಾಗಿ ಹುಡುಕಿ ಬಂದ ಈ ಪುಣ್ಯವನ್ನು ನಾನೇಕೆ ಬೇಡವೆನ್ನಲಿ? ಇಗೋ ಬಲಿಪೀಠದಲ್ಲಿ ನನ್ನ ಶಿರಸ್ಸನ್ನು ಒಡ್ಡಿರುವೆನು. ಆನಂದದಿಂದ ಬಲಿದಾನಕ್ಕೆ ನಾನು ಸಿದ್ಧನಿರುವೆನು. ಹಿಂತೆಗೆಯದೆ, ನನ್ನ ಶಿರಸ್ಸನ್ನು ಛೇದಿಸಿ, ತ್ವರೆಯಾಗಿ ಕೊಂಡು ಹೋಗಿ ನಿಮ್ಮರಸನಲ್ಲಿ ಒಪ್ಪಿಸು' ಎಂದು ಬೇಡಿದ. ನನಗೆ ಮನಸ್ಸು ನೊಂದಿತು; ಕೈ ನಡುಗಿತು; ಸ್ತಬ್ಧನಾಗಿ ನಿಂತುಬಿಟ್ಟೆ. ಆಗ ಹಕೀಮನು ಮತ್ತೆ ಮತ್ತೆ ತನ್ನನ್ನು ಕೊಲ್ಲುವಂತೆ ನನ್ನನ್ನು ಒತ್ತಾಯಪಡಿಸಿದ. ನನ್ನ ನಿಧಾನವನ್ನು ಕಂಡು ಅವನು ನಿರಾಶೆಗೊಂಡ. 'ಏಕೆ ನನ್ನ ವಚನದಲ್ಲಿ ನಿನಗೆ ಸಂಶಯವೇ? ನಿನಗೆ ನಂಬಿಕೆ ಬಾರದಿಲ್ಲವೇ? ನಾನಿತ್ತ ವಚನವು ಮಳೆಗೆ ಅಳುಕದು; ಬಿಸಿಲಿಗೆ ಒಣಗದು; ಬಿರುಗಾಳಿಗೆ ತೂರಿಹೋಗದು;

ಕಷ್ಟದಲ್ಲಿ ಕುಂದದು ; ಕುಸಿದು ಬಿದ್ದು ಹೋಗದು ; ಚಪಲದಿಂದ ಚಂಚಲಿಸದು ; ತತ್ತಳಿಸುವಿಯೇಕೆ? ಹಕೀಮನು ಹತಾಶನಲ್ಲ; ಇತರರ ಹತ್ಯೆಯನ್ನು ನೋಡಲಾರ. ಆದರೆ ತನ್ನ ಹತ್ಯೆಗೆ ಹೆದರ. ಹುಟ್ಟಿದವ ಎಂದಾದರೊಂದು ದಿನ ಸಾಯಲೇಬೇಕು. ಸಾಯುವ ಮುನ್ನ—ಸಾವು ಎಂದು ಅಡರಿಸಿದರೂ ಸರಿ—ಸೃಷ್ಟಿ ಕರ್ತನ ಸಾನಿಧ್ಯದಲ್ಲಿ ನಿಂತು ಒಪ್ಪಿಸಬೇಕಾದ ವರದಿ ಮಾತ್ರ ಸಿದ್ಧವಾಗಿದ್ದರೆ ಸರಿ........ಏಸು ತತ್ತಳಿಸುತ್ತಿರುವೆ? ತರಿ ; ನನ್ನ ಕೊರಳನ್ನು ಬೇಗ ತರಿ. ನಿಧಾನಿಸಿದರೆ ನನ್ನವರು ಬಂದಾರು. ನಿನ್ನ ತಲೆಯು ಉರುಳೀತು. ನಿನ್ನ ಖಡ್ಗಕ್ಕೆ ಹರಿತ ಸಾಲದಿದ್ದರೆ ನನ್ನ ಖಡ್ಗವನ್ನು ತೆಗೆದುಕೋ' ಎಂದ. ನನಗೇನೂ ತೋರದಾಯಿತು. ಪ್ರಭು ! ನಾ ಒಲ್ಲೆ ; ನಿನ್ನ ತಲೆಯನ್ನು ತರಿಯುವ್ವೊಲ್ಲೆ. ನಮ್ಮ ರಾಜನು ಬೇಕಾದರೆ ನನ್ನ ತಲೆಯನ್ನೇ ತರಿಯಲಿ' ಎಂದೆ. ಹಕೀಮನು ಮತ್ತೆ ಹೇಳಿದ: 'ಹಾಗಾದರೆ ಹೋಗು; ನಿಮ್ಮರಸನಿಗೆ ಹೇಳು. ಹಕೀಮನ ತಲೆಯನ್ನು ಕಂಡರಲ್ಲದೆ ಅವನ ಮನಸ್ಸಿಗೆ ನೆಮ್ಮದಿಯುಂಟಾಗದಿದ್ದಲ್ಲಿ ಮತ್ತೆ ಬಂದು ಹೇಳು. ನನ್ನ ತಲೆ ಮಾತ್ರವಲ್ಲ; ಸಶರೀರನಾಗಿ ನಾನೇ ಬಂದು ಅವನೆದುರಿಗೆ ನಿಲ್ಲುತ್ತೇನೆ. ನನ್ನನ್ನು ಸಂಹರಿಸಲಿ; ಸಂತುಷ್ಟನಾಗಲಿ' ಎಂದ. ಪ್ರಭು! ಹಕೀಮನ ಮಾತಿನಲ್ಲಿ ನನಗೆ ಪೂರ್ಣ ವಿಶ್ವಾಸವುಂಟು. ಅವನು ಮಾನವರಿಗೆ ಮಿಂಚಿದವನು. ಅವನು ಹೆದರುವುದು ದೇವರೊಬ್ಬನಿಗೇ ! ಬಾಳುವುದು ದೇವರ

ಹೆಸರಿನಲ್ಲೇ! ಅವನ ಆತ್ಮಶಕ್ತಿಯು ಅತ್ಯದ್ಭುತವಾದುದು. ನನ್ನ ಮಾತನ್ನು ಪರೀಕ್ಷಿಸಬೇಕಾದರೆ ಸಾಧಾರಣ ದೂತರನ್ನು ಕಳುಹಿಸಿ ಕೊಡಿ. ಹತೀಮನೇ ತಮ್ಮೆದುರಿಗೆ ಬಂದು ನಿಂತಾನು. ಪ್ರಭು! ನನ್ನ ವೃತ್ತಾಂತವು ಇಷ್ಟೇ! ಹತೀಮನನ್ನು ಹತ ಮಾಡುವುದಕ್ಕೆ ಒಬ್ಬ ಹೇಡಿಯಾದರೂ ಸಾಕು; ಒಬ್ಬ ಸೇನಾಧಿಪತಿ ಅದಕ್ಕೆ ಬೇಕಾಗಿಲ್ಲ ಎಂದು ನನಗೆ ಸ್ಪಷ್ಟವಾಗಿ ಗೊತ್ತಾಯಿತು. ಇದಕ್ಕೆ ಕಾರಣವಾದರೂ ಇಷ್ಟೇ— ಹತೀಮನು ತನ್ನ ದೇಹವನ್ನು ಕಸಕ್ಕಿಂತ ಕಡೆಯಾಗಿ ಕಂಡಿರುತ್ತಾನೆ. ಅವನು ಕಾತುರಗೊಳ್ಳುವುದು ಆತ್ಮದ ಉದ್ಧಾರಕ್ಕಾಗಿ. ನನ್ನೆಲ್ಲರ ವಿಚಾರವೂ ಅಂತೆಯೇ ಎಂದು ಆ ಜ್ಞಾನದ ಅರಸು ಬೋಧೆ ಮಾಡಿರುತ್ತಾನೆ. ಆದುದರಿಂದಲೇ ನಾನೂ ಈ ದೇಹಕ್ಕೆ ದಂಡನೆಯೊದಗಿದರೆ ಹೆದರೆ. ಈಗ ತಾವು ನನ್ನನ್ನು ಶೂಲಕ್ಕೆ ಬೇಕಾದರೆ ಏರಿಸಿ; ಖಡ್ಗದಲ್ಲಿ ಬೇಕಾದರೆ ಸೀಳಿ ಹಾಕಿ. ಹತೀಮನು ಪೃಥ್ವಿಯಲ್ಲಿ ಪರಮಾತ್ಮನ ಪ್ರತ್ಯಕ್ಷ ಪ್ರತಿನಿಧಿ! ಅವನನ್ನು ನೆನಸುತ್ತ ನಾನು ಅಸು ತೊರೆಯಲು ಸಿದ್ಧನಾಗಿಯೇ ಬಂದಿದ್ದೇನೆ.

ರಾ : ಸೇನಾಧಿಪತಿ! ಬಾ, ನನ್ನನ್ನು ಆಲಿಂಗಿಸು. ನನ್ನ ಮುಡುಕುತನವನ್ನು ಮನ್ನಿಸು. ಹತೀಮನ ವಿಚಾರವನ್ನು ನೀನು ಹೇಳುತ್ತಿದ್ದಂತೆ ಅವನ ಆ ತ್ಯಾಗ, ಆ ಸೌಜನ್ಯತೆ, ಆ ನಿರ್ಮಲ ವಿಶಾಲ ಮನೋಭಾವ, ಇವು ನನ್ನನ್ನು ಮುಗ್ಧನನ್ನಾಗಿ ಮಾಡಿಬಿಟ್ಟಿದೆ. ನನ್ನ

ಕ್ರೋಧವು ಸೂರ್ಯನ ಕಿರಣಗಳನ್ನು ಕಂಡ ಹಿಮರಾಶಿ ಯಂತೆ, ಕರಗಿಹೋಯಿತು. ಕ್ಷಣ ಕ್ಷಣಕ್ಕೂ ನನ್ನ ಮತಿ ವಿಕಾಸಗೊಳ್ಳತೊಡಗಿದೆ. ನನ್ನ ಎದೆ ಉಬ್ಬಿ ಆನಂದದಿಂದ ಬಿರಿಯುವಂತಾಗಿದೆ. ನಾನೆಂತಹ ದುಡುಕು ಮಾತುಗಳನ್ನಾಡಿದೆ. ಈಗ ನಾಚಿಕೊಂಡ ವನು ನಾನು. ಹಕೀಮನೆಂತಹ ಮಹಾನ ಭಾವ! ಸೇನಾಧಿಪತಿ! ನಿನ್ನ ಚರ್ಯೆಯನ್ನು, ನೀನಾಚರಿಸಿದ ನೀತಿಯನ್ನು ನಾನು ಸಂಪೂರ್ಣವಾಗಿ ಒಪ್ಪಿದೆ. ಇರಲಿ, ಹಕೀಮನು ಕೊನೆಯದಾಗಿ ಅಂದುದೇನು?

ಸೇ: "ಹೋಗು; ಅಧೀರನಾಗ ಬೇಡ. ರಾಜನಿಗೆ ನಿಗ್ರಹಾ ನುಗ್ರಹ ಶಕ್ತಿಯುಂಟು. ಒಮ್ಮೆ ಆಗ್ರಹಗೊಂಡಾನು. ಮತ್ತೊಮ್ಮೆ ಅನುಗ್ರಹ ಮಾಡಿಯಾನು. ಕೇಳು, ನನ್ನ ತಲೆ ಮಾತ್ರವಲ್ಲ; ಯಾವ ಕ್ಷಣದಲ್ಲಿ ಬೇಕಾದರೂ ನನ್ನ ಇಡೀ ಶರೀರವೇ ಅವನ ವಶ". ಹಕೀಮನು ಹೀಗೆಂದ ಪ್ರಭು!

ರಾ: ಧನ್ಯ! ಧನ್ಯ!! ಹಕೀಮ! ಜನರು ನಿನ್ನನ್ನೇಕೆ ಇಷ್ಟು ಬಗೆಯಲ್ಲಿ ಕೊಂಡಾಡುವರು? ಈಗ ನನಗೆ ಸ್ಪಷ್ಟವಾಗಿ ಗೊತ್ತಾಯಿತು. ಸೇನಾಪತಿ! ಹಕೀಮನೇ ಮೂರ್ತಿ ವೆತ್ತು ನನ್ನೆದುರಿಗೆ ನಿಂತು ನನ್ನನ್ನು ನಿಂದಿಸುತ್ತಿರು ವಂತಿದೆ. 'ತಿಳಿಗೇಡಿ ಏಮಾನ್ ಅರಸ! ಉದಾರತೆಯ ಅರ್ಥವನ್ನು ಇಂದು ತಾನೇ ಕಂಡುಕೊಂಡೆಯಾ?" ಎಂದು. ಅಹುದು ಹಕೀಮನು ವಂದನಾರ್ಹನೇ! ದಾನದ ಪ್ರಮಾಣವನ್ನು ಕಂಡು ಉದಾರತೆಯನ್ನು ಅಳೆಯಲಾಗದು. ಅದು ಅದರ ವಿಧಾನದಲ್ಲಿದೆ,

ಸಂದರ್ಭದಲ್ಲಿದೆ; ಸೊಬಗಿನಲ್ಲಿದೆ. ಹೆಚ್ಚೇಕೆ? ಹತೀಮನ
ಅಂಗುಷ್ಠವನ್ನು ತೊಳೆಯುವುದಕ್ಕೆ ನಾನು ಅಸಮರ್ಥ.
ಇನ್ನು ಅವನ ಕೊರಳನ್ನು ತರಿಯಬಲ್ಲೆನೇ? ಹತೀಮ
ನನ್ನು ನಾಡೆಲ್ಲ ಮುಕ್ತಕಂಠದಿಂದ ಹೊಗಳುತ್ತಿರುವುದು
ಅತ್ಯಂತ ಸೂಕ್ತವಾಗಿದೆ. ತೀರ ಸಹಜವಾಗಿ ಮಾತ್ರ
ವಲ್ಲ, ಸಮಂಜಸವಾಗಿಯೂ ಇದೆ. ಹತೀಮನ
ಕೀರ್ತಿಯು ಅಮರವಾದುದು! ಅದಕ್ಕೆ ಚ್ಯುತಿ ತರಲೆಳೆ
ಸಿದ ನಾನು ಶುದ್ಧ ಅವಿವೇಕಿ!

ಸೇ: ಪ್ರಭು! ತಾವೇಕೆ ಆತ್ಮನಿಂದೆ ಮಾಡಿಕೊಳ್ಳಬೇಕು?

ರಾ: ಸೇನಾಧಿಪತಿ! ಮಿತಿ ಮಿಂಚಿ ಇದುವರೆಗೂ ನಾನು ಆತ್ಮ
ಶ್ಲಾಘನೆ ಮಾಡಿಕೊಂಡೆ. ಅದಕ್ಕೆ ತಕ್ಕುದಾದ ಪ್ರತೀ
ಕಾರ ಈಗ ಆತ್ಮನಿಂದೆ! ಅದನ್ನುಳಿದು ಬೇರೊಂದಿಲ್ಲ.
ಸಾಕು; ಸಾವಕಾಶ ಬೇಡ. ಶೀಘ್ರವಾಗಿ ಸೂಕ್ತ
ಪರಿವಾರವನ್ನು ಸಿದ್ಧಗೊಳಿಸು. ನೀನೂ ಸಿದ್ಧನಾಗು.
ಇದೀಗಲೇ ಹೊರಟು ಆ ಪುಣ್ಯಚರಿತ ಉದಾತ್ತ
ಮಹಾನುಭಾವನ ಸಂದರ್ಶನ ಮಾಡಿ ಅವನ ದಿವ್ಯಚರಣ
ಗಳಿಗೆರಗಿ ಅವನಲ್ಲಿ ಕ್ಷಮೆ ಬೇಡಿ ಕೃತಕೃತ್ಯರಾಗುವ!

ಸೇ: ಆಜ್ಞೆ, ಪ್ರಭು! ಈಗ ನನಗೆ ನೆನಪಾಯಿತು.
"ಪ್ರೇಮವು ಪವಿತ್ರವಾದುದು; ಮಾನವರೆಲ್ಲರನ್ನೂ ಪರ
ಮಾತ್ಮನ ಸ್ವರ್ಣಸದೃಶ ಪಾದಗಳಿಗೆ ಬಿಗಿದು ಬಂಧಿಸುವ
ಸೂತ್ರ ಪ್ರೇಮವೇ. ನಿಶ್ಚಲ, ನಿರ್ಮಲ ಪ್ರೇಮವೇ ಪೃಥ್ವಿ
ಯಲ್ಲಿ ಪರಮಾತ್ಮನ ಪ್ರತಿನಿಧಿ; ಆ ಪ್ರೇಮಸೂತ್ರವಳಿದರೆ
ಪೃಥ್ವಿಯು ಒಂದಂಗುಲದಷ್ಟೂ ಚಲಿಸದು."

॥ ಮಂಗಳಂ ॥

ಇದೇ ಸಂಪುಟದ ಮೂರನೆಯ ಪ್ರಕಟಣೆ

ಸುಧೆಯ ಸಾಹಸ

(ಮಾತೃ ಪ್ರೇಮ)

ಫುಲ್ ಸ್ಕೇಪ್ ಅಷ್ಟದಳದ ಸುಮಾರು ೩೦ ಪುಟಗಳು

ಬೆಲೆ: ೦-೮-೦

ಏಕಾಂಕ ನಾಟಕ

ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್, ಬಿ. ಎ.,

ಪ್ರಕಾಶಕರು:

ನವಚೇತನ ಪ್ರಕಟಣಾಲಯ

ಎ 70, ಎರಡನೆಯ ರಸ್ತೆ, ಬಸವನಗುಡಿ,

ಬೆಂಗಳೂರು-೪